# ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

(w.e.f.VII.I.MMXVII)

**(Formerly Karnataka State Women's University, Vijayapura. Since-21-6-2003)**

☎:08352-229051 www.kswu.ac.in **Fax**: 08352 -229057


ಸಂಖ್ಯೆ:ಮವಿವಿ/ಶೈಕ್ಷಣಿಕ/ಸಿಂಡಿಕೇಟ್–97/2016–17/3229 ದಿನಾಂಕ:17–03–2017

ಗೆ,
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ
ಎಲ್ಲ ಸಿಂಡಿಕೇಟ್ ಸದಸ್ಯರುಗಳಿಗೆ

**ವಿಷಯ**: ದಿನಾಂಕ: 14–03–2017 ರಂದು ಮುಂಜಾನೆ 11:00ಗಂಟೆಗೆ ವಿಶ್ವವಿದ್ಯಾನಿಲಯದ "ಜ್ಞಾನಶಕ್ತಿ (ತೊರವಿ) ಆವರಣ ಆಡಳಿತ ಭವನದ ಸಿಂಡಿಕೇಟ್ ಹಾಲ್"ನಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು.

ಮಾನ್ಯರೆ,

ದಿನಾಂಕ: 14–03–2017 ರಂದು ಮುಂಜಾನೆ 11:00ಗಂಟೆಗೆ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ "ಜ್ಞಾನಶಕ್ತಿ (ತೊರವಿ) ಆವರಣದ ಸಿಂಡಿಕೇಟ್ ಹಾಲ್"ನಲ್ಲಿ ಜರುಗಿದ **"2016–17ನೇ ಹಣಕಾಸು ಸಾಲಿನ ಎಂಟನೆಯ ಹಾಗೂ 97ನೇ ಸಿಂಡಿಕೇಟ್ ಸಾಮಾನ್ಯ ಸಭೆಯ"** ನಡವಳಿಗಳನ್ನು ಇದರೊಂದಿಗೆ ಕಳುಹಿಸಲಾಗಿದೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

**ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು**
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ

**ಅಡಕ: ನಡವಳಿಗಳು 1 ರಿಂದ 19 ಪುಟಗಳು**

**<u>ಪ್ರತಿಗಳು:–</u>**

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560001.
2. ಅಪರ ಮುಖ್ಯ ಕಾರ್ಯದರ್ಶಿಗಳು , ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯಗಳು) ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ ಡಾ॥ ಬಿ.ಆರ್.ಅಂಬೇಡ್ಕರ ವೀದಿ, ಬೆಂಗಳೂರು – 560001.
3. ಕಛೇರಿ ಪ್ರತಿ.

# ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರದ ಸಿಂಡಿಕೇಟ್ ಸದಸ್ಯರ ಪಟ್ಟಿ

| ಕ್ರ.ಸಂ | ಕರಾವಿ ಅಧಿನಿಯಮ 2000 ಪ್ರಕರಣ 28 | ಸದಸ್ಯರ ಹೆಸರು | ಪದನಾಮ | ಇಂದ | ವರೆಗೆ |
|---|---|---|---|---|---|
| 1. | 1(ಎ) | ಪ್ರೊ.ಸಬಿಹಾ, ಕುಲಪತಿಗಳು | ಸಭಾಧ್ಯಕ್ಷರು | 20–6–2016 | |
| 2. | 1(ಬಿ) | ಆಯುಕ್ತರು ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 3. | 1(ಸಿ) | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 4. | 1(ಡಿ) | ಪ್ರೊ.ವಿಜಯಾ ಕೋರಿಶೆಟ್ಟಿ, ಡೀನರು ಸಮಾಜ ವಿಜ್ಞಾನ ನಿಕಾಯ. | ಸದಸ್ಯರು | 4–11–2016 | 3–11–2017 |
| 5. | 1(ಇ) | ನಾಮನಿರ್ದೇಶನ ಆಗಿರುವುದಿಲ್ಲ | | | |
| 6. | 1(ಇ) | ಡಾ.ಶ್ರೀನಿವಾಸ ಬಳ್ಳಿ | ಸದಸ್ಯರು | 01–12–2014 | 10–04–2017 |
| 7. | 1(ಎಫ್) | ಶ್ರೀ.ನಾನಾಗೌಡ ಹಿಪ್ಪರಗಿ | ಸದಸ್ಯರು | 02–12–2016 | 01–12–2017 |
| 8. | 1(ಎಫ್) | ಶ್ರೀಮತಿ ಬುಷಿರಾ ಬೇಗಂ | ಸದಸ್ಯರು | 02–12–2016 | 01–12–2017 |
| 9. | 1(ಎಫ್) | ಡಾ. ಬಿರಾದಾರ ಅರವಿಂದಕುಮಾರ | ಸದಸ್ಯರು | 02–12–2016 | 01–12–2017 |
| 10. | 1(ಎಫ್) | ಡಾ. ಹುಮೆರಾ ಸುಲ್ತಾನ | ಸದಸ್ಯರು | 02–12–2016 | 01–12–2017 |
| 11. | 1(ಜಿ) | ಡಾ.ಸತ್ಯಾನಂದ ಪಾತ್ರೋಟ | ಸದಸ್ಯರು | 19–02–2015 | 18–02–2018 |
| 12. | 1(ಜಿ) | ಶ್ರೀ.ಎಂ.ಎಲ್.ಶಾಂತಗಿರಿ | ಸದಸ್ಯರು | 19–02–2015 | 18–02–2018 |
| 13. | 1(ಜಿ) | ಡಾ.ಫರ್ಜಾನಾ.ಎಂ | ಸದಸ್ಯರು | 19–02–2015 | 18–02–2018 |
| 14. | 1(ಜಿ) | ಡಾ.ಸುಜಾತಾ ಎಸ್ ಜಂಗಮಶೆಟ್ಟಿ | ಸದಸ್ಯರು | 19–02–2015 | 18–02–2018 |
| 15. | 1(ಜಿ) | ಶ್ರೀ.ಆರ್.ಸಿ.ಪಾಟೀಲ | ಸದಸ್ಯರು | 19–02–2015 | 18–02–2018 |
| 16. | 1(ಜಿ) | ಶ್ರೀ.ರವೀಂದ್ರ ಭಾವಿಕಟ್ಟಿ | ಸದಸ್ಯರು | 19–02–2015 | 18–02–2018 |
| 17. | 1(ಹೆಚ್) | ಪ್ರೊ.ಮಹೇಶ ಐ ಚಿಂತಾಮಣಿ, ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ | ಸದಸ್ಯರು | 01–06–2016 | 31–05–2017 |
| 18. | 1(ಐ) | ನಿರ್ದೇಶಕರು ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 19. | 1(ಜೆ) | ಜಂಟಿ ನಿರ್ದೇಶಕರು, ಧಾರವಾಡ | ಸದಸ್ಯರು | -- | |
| 20. | 1(ಕೆ) | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 21. | | ಕಾರ್ಯದರ್ಶಿಗಳು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು | ಸದಸ್ಯರು | -- | -- |
| 22. | ಪ್ರಕರಣ 18(2) | ಪ್ರೊ.ವಿ.ವಿ.ಮಳಗಿ, ಕುಲಸಚಿವರು(ಮೌ) | ಸದಸ್ಯರು | 14–7–2016 | |
| 23. | ಪ್ರಕರಣ 17(2) | ಪ್ರೊ. ಕೆ.ಪಿ.ಶ್ರೀನಾಥ್, ಕುಲಸಚಿವರು | ಸದಸ್ಯ – ಕಾರ್ಯದರ್ಶಿ | 18–06–2016 | |

# ದಿನಾಂಕ:14–03–2017 ರಂದು ಬೆಳಿಗ್ಗೆ 11:00ಗಂಟೆಗೆ, ಸಿಂಡಿಕೇಟ್ ಸಭಾಂಗಣ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ ಇಲ್ಲಿ ಜರುಗಿದ 97ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

## ಸಭೆಗೆ ಹಾಜರಾದ ಸದಸ್ಯರು

| | | |
|---|---|---|
| 1. | ಪ್ರೊ. ಸಬಿಹಾ, ಕುಲಪತಿಗಳು | : ಸಭಾಧ್ಯಕ್ಷರು |
| 2. | ಪ್ರೊ. ವಿಜಯಾ ಕೋರಿಶೆಟ್ಟಿ, ಡೀನರು ಸಮಾಜ–ವಿಜ್ಞಾನ ನಿಕಾಯ | : ಸದಸ್ಯರು |
| 3. | ಪ್ರೊ. ಮಲ್ಲೇಶ್ವರಪ್ಪಾ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ,ಧಾರವಾಡ | : ಸದಸ್ಯರು |
| 4. | ಡಾ.ಶ್ರೀನಿವಾಸ ಬಳ್ಳಿ | : ಸದಸ್ಯರು |
| 5. | ಶ್ರೀ.ನಾನಾಗೌಡ ಹಿಪ್ಪರಗಿ | : ಸದಸ್ಯರು |
| 6. | ಶ್ರೀಮತಿ ಬುಷಿರಾ ಬೇಗಂ | : ಸದಸ್ಯರು |
| 7. | ಡಾ.ಬಿರಾದಾರ ಅರವಿಂದಕುಮಾರ | : ಸದಸ್ಯರು |
| 8. | ಡಾ.ಹುಮೆರಾ ಸುಲ್ತಾನ | : ಸದಸ್ಯರು |
| 9. | ಡಾ.ಸತ್ಯಾನಂದ ಪಾತ್ರೋಟ | : ಸದಸ್ಯರು |
| 10. | ಡಾ.ಫರ್‌ಜಾನಾ ಎಂ | : ಸದಸ್ಯರು |
| 11. | ಶ್ರೀ ಆರ್.ಬಿ.ಭಾವಿಕಟ್ಟಿ | : ಸದಸ್ಯರು |
| 12. | ಶ್ರೀ ಆರ್.ಸಿ.ಪಾಟೀಲ | : ಸದಸ್ಯರು |
| 13. | ಪ್ರೊ. ಮಹೇಶ ಐ ಚಿಂತಾಮಣಿ, ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ | : ಸದಸ್ಯರು |
| 14. | ಪ್ರೊ.ವಿ.ವಿ.ಮಳಗಿ, ಕುಲಸಚಿವರು (ಮೌಲ್ಯಮಾಪನ) | : ಸದಸ್ಯರು |
| 15. | ಪ್ರೊ.ಕೆ.ಪಿ.ಶ್ರೀನಾಥ, ಕುಲಸಚಿವರು | : ಸದಸ್ಯ ಕಾರ್ಯದರ್ಶಿ |

## ಸಭೆಗೆ ಗೈರು ಹಾಜರಾದ ಸದಸ್ಯರು

| | | |
|---|---|---|
| 1. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 2. | ಶ್ರೀ ಮುದುಕಪ್ಪ ಲಕ್ಷ್ಮಪ್ಪ ಶಾಂತಗಿರಿ | : ಸದಸ್ಯರು |
| 3. | ಡಾ.ಸುಜಾತಾ ಜಂಗಮಶೆಟ್ಟಿ | : ಸದಸ್ಯರು |
| 4. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 5. | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 6. | ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 7. | ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು | : ಸದಸ್ಯರು |

ಮಾನ್ಯ ಕುಲಪತಿಗಳಾದ ಪ್ರೊ.ಸಬಿಹಾ ಅವರು ಎಲ್ಲ ಸದಸ್ಯರನ್ನು ಸ್ವಾಗತಿಸಿ, ಕಾರ್ಯಸೂಚಿಯನ್ನು ಮಂಡಿಸಲು ಕುಲಸಚಿವರಿಗೆ ತಿಳಿಸಿದರು.

ದಿನಾಂಕ: 08–02–2017 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವುದು.

**ನಿರ್ಣಯ:**

1. **ದಿನಾಂಕ:8–02–2017ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು.**
2. **ಪುರವಣಿ ಸಂಖ್ಯೆ:09ರ ಕುರಿತು ಡಾ.ಮಲ್ಲಿಕಾರ್ಜುನ.ಎನ್.ಎಲ್, ಸಹ–ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ವ್ಯವಹಾರ ಅಧ್ಯಯನ ವಿಭಾಗ ಇವರಿಗೆ ಅಂತರ್‌ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಅನುಮತಿಸಿ ಪ್ರಯಾಣ ಭತ್ಯೆ/ ದಿನಭತ್ಯೆ, ಹಾಗೂ ನೋಂದಣಿ ಶುಲ್ಕವನ್ನು ನೀಡಲು ತೀರ್ಮಾನಿಸಲಾಯಿತು.**

ದಿನಾಂಕ: 19–12–2016 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ.

**ನಿರ್ಣಯ:– ದಿನಾಂಕ:19–12–2016ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ಒಪ್ಪಿಕೊಳ್ಳಲಾಯಿತು.**

ದಿನಾಂಕ: 10–01–2017 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ.

**ನಿರ್ಣಯ:– ದಿನಾಂಕ:10–01–2017 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡವಳಿಗಳನ್ನು ಒಪ್ಪಿಕೊಳ್ಳಲಾಯಿತು.**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ 59(8)ರಲ್ಲಿ ಇರುವಂತೆ ದಿನಾಂಕ:10–03–2017ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:– ಅನುಮೋದಿಸಲಾಯಿತು**

**ದಿನಾಂಕ:14–03–2017ರಂದು ಜರುಗಿದ 97ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 01*

**ವಿಷಯ:** ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ "Statute relating to the establishment of Mundargi Sri Jagadguru Annadaneeshwar sharana sahitya sanskruti studies chair" ಗೆ ದಿನಾಂಕ 23–12–2016ರಂದು ಘನತೆವೆತ್ತ ಕುಲಾಧಿಪತಿಳು ಅನುಮೋದನೆ ನೀಡಿರುವ ವಿಷಯವನ್ನು ವಿದ್ಯಾವಿಷಯಕ್ ಪರಿಷತ್‌ನ ಅವಗಾಹನೆಗೆ ಮಂಡಿಸಿದೆ.

**ಉಲ್ಲೇಖ:– 1.**ವಿದ್ಯಾವಿಷಯಕ ಪರಿಷತ್‌ನ ಸಭೆಯ ನಡವಳಿಗಳು ದಿನಾಂಕ:26–10–2015, ಟೇಬಲ್ ಅಜೆಂಡಾ ಸಂಖ್ಯೆ:01

2.ಸಿಂಡಿಕೇಟ್ ಸಭೆಯ ನಡವಳಿಗಳು ದಿನಾಂಕ:21–11–2015, ಐಟಂ ಸಂಖ್ಯೆ:01

**ನಿರ್ಣಯ :– ವಿದ್ಯಾವಿಷಯಕ ಪರಿಷತ್ ನಿರ್ಣಯವನ್ನು ಒಪ್ಪಿಕೊಳ್ಳಲಾಯಿತು.**

**ದಿನಾಂಕ:14–03–2017ರಂದು ಜರುಗಿದ 97ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 02*

**ವಿಷಯ:** 2017–18 ನೇ ಶೈಕ್ಷಣಿಕ ಸಾಲಿಗಾಗಿ ಹೊಸ ಮಹಿಳಾ ಪದವಿ ಹಾಗೂ ಸ್ನಾತಕೋತ್ತರ ಕಾಲೇಜುಗಳಲ್ಲಿ, ಹೊಸ ಕೋರ್ಸು, ಹೊಸವಿಷಯ, ಶಾಶ್ವತ ಸಂಯೋಜನೆ, ಶಾಶ್ವತ ನವೀಕರಣ, ವಿಸ್ತರಣೆ ಮತ್ತು ಮುಂದುವರಿಕೆ ಸಂಲಗ್ನತೆ ಮಂಜೂರಾತಿ ಕುರಿತು.

**ಉಲ್ಲೇಖ:** ಸಿಂಡಿಕೇಟ್ ಸಭೆಯ ದಿನಾಂಕ:19–12–2016, ಗೊತ್ತುವಳಿ ಸಂಖ್ಯೆ:04.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸಿಂಡಿಕೇಟ ಗೊತ್ತುವಳಿ ಸಂಖ್ಯೆ:04, ದಿನಾಂಕ: 19–12–2016 ರಂತೆ 2017–18 ನೇ ಶೈಕ್ಷಣಿಕ ಸಾಲಿಗೆ ಹೊಸ ಮಹಿಳಾ ಪದವಿ ಹಾಗೂ ಸ್ನಾತಕೋತ್ತರ ಕಾಲೇಜುಗಳಲ್ಲಿ, ಹೊಸ ಕೋರ್ಸು, ಹೊಸ ವಿಷಯ, ಶಾಶ್ವತ, ಶಾಶ್ವತ ನವೀಕರಣ, ವಿಸ್ತರಣೆ ಮತ್ತು ಮುಂದುವರಿಕೆ ಸಂಲಗ್ನತೆ ಮಂಜೂರಾತಿಗಾಗಿ 10 ಸ್ಥಾನಿಕ ವಿಚಾರಣಾ ಸಮಿತಿಗಳನ್ನು ರಚಿಸಲಾಗಿತ್ತು. ಸದರಿ ಸ್ಥಾನಿಕ ವಿಚಾರಣಾ ಸಮಿತಿಗಳು ಕಾಲೇಜು ತಪಾಸಣೆ ಮಾಡಿ ವರದಿಗಳನ್ನು ಸಲ್ಲಿಸಿರುತ್ತಾರೆ. ವಿವರ ಈ ಕೆಳಗಿನಂತಿದೆ.

| ಕ್ರ.ಸ | ವಿವರಗಳು | ಸಂಖ್ಯೆಗಳು |
|---|---|---|
| 1. | **ಹೊಸ ಖಾಸಗಿ** ಕಾಲೇಜುಗಳ ಸಂಯೋಜನೆಗಾಗಿ ಸ್ವೀಕೃತವಾದ ಅರ್ಜಿಗಳು | 09 |
| 2. | ಸಂಯೋಜಿತ ಕಾಲೇಜುಗಳಲ್ಲಿ **ಹೊಸ ಕೋರ್ಸು** ಮತ್ತು ಮುಂದುವರಿಕೆ ಸಂಯೋಜನೆಗಳಿಗಾಗಿ ಸ್ವೀಕೃತವಾದ ಅರ್ಜಿಗಳು | 04 |
| 3. | ಸಂಯೋಜಿತ ಕಾಲೇಜುಗಳಲ್ಲಿ **ಹೊಸ ವಿಷಯ** ಮತ್ತು ಮುಂದುವರಿಕೆ ಸಂಯೋಜನೆಗಾಗಿ ಸ್ವೀಕೃತವಾದ ಅರ್ಜಿಗಳು | 04 |
| 4. | ಸಂಯೋಜಿತ ಕಾಲೇಜುಗಳಲ್ಲಿ **ಹೊಸ ಕಾಂಬಿನೇಶನ್** ಮತ್ತು ಮುಂದುವರಿಕೆ ಸಂಯೋಜನೆಗಾಗಿ ಸ್ವೀಕೃತವಾದ ಅರ್ಜಿಗಳು | 02 |
| 5. | ಸಂಯೋಜಿತ ಕಾಲೇಜುಗಳಲ್ಲಿ **ವಿದ್ಯಾರ್ಥಿ ಪ್ರಮಾಣ** ಹೆಚ್ಚಿಸಲು ಕೋರಿ ಬಂದ ಅರ್ಜಿಗಳು | 04 |
| 6. | ಸಂಯೋಜಿತ ಕಾಲೇಜುಗಳಲ್ಲಿ **ಶಾಶ್ವತ ನವೀಕರಣ** ಸಂಯೋಜನೆಗೆ ಸ್ವೀಕೃತವಾದ ಅರ್ಜಿಗಳು | 02 |
| 7. | ಸಂಯೋಜಿತ ಕಾಲೇಜುಗಳಲ್ಲಿ **ಹೊಸ ಸ್ನಾತಕೋತ್ತರ** ಕೋರ್ಸಿಗೆ ಸ್ವೀಕೃತವಾದ ಅರ್ಜಿಗಳು | 03 |
| 8. | ಸಂಯೋಜಿತ ಕಾಲೇಜುಗಳಲ್ಲಿ **ಸ್ನಾತಕೋತ್ತರ ಕೋರ್ಸುಗಳಿಗೆ ಮುಂದುವರಿಕೆ** | 10 |

| | | |
|---|---|---|
| | ಸಂಯೋಜನೆಗಳಿಗಾಗಿ ಬಂದ ಅರ್ಜಿಗಳು | |
| 9. | **ಕಾಲೇಜು ಹೆಸರು** ಬದಲಾವಣೆಗೆ ಸ್ವೀಕೃತವಾದ ಅರ್ಜಿಗಳು | 02 |
| 10. | 2017–18 ನೇ ಸಾಲಿಗೆ **ದಕ್ಷಿಣ ಕರ್ನಾಟಕದ ಸರ್ಕಾರಿ ಕಾಲೇಜುಗಳ** ಮುಂದುವರಿಕೆ ಸಂಯೋಜನೆಗೆ ಬಂದ ಅರ್ಜಿಗಳು | 03 |
| 11. | **ಸ್ನಾತಕ ಕೋರ್ಸುಗಳಿಗೆ ಮುಂದುವರಿಕೆ** ಸಂಯೋಜನೆಗಳಿಗಾಗಿ ಬಂದ ಅರ್ಜಿಗಳು | 116 |
| 12. | 2017–18 ನೇ ಸಾಲಿಗೆ ಹಾಗೂ ಇದಕ್ಕಿಂತ ಮುಂಚಿತವಾಗಿ **ಪ್ರಸ್ತಾವನೆ ಸಲ್ಲಿಸದಿರುವ ಕಾಲೇಜುಗಳ** ಸಂಖ್ಯೆಗಳು | 13 |

ಸಮಿತಿಯ ವರದಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 59 ರನ್ವಯ ದಿನಾಂಕ:10–03–2017ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ, ಈ ಕಳಗಿನಂತೆ ನಿರ್ಣಯಿಸಲಾಯಿತು.

*ನಿರ್ಣಯ:–*

1. **2017–18 ನೇ ಶೈಕ್ಷಣಿಕ ಸಾಲಿಗೆ ಹೊಸ ಮಹಿಳಾ ಪದವಿ ಹಾಗೂ ಸ್ನಾತಕೋತ್ತರ ಕಾಲೇಜುಗಳಲ್ಲಿ, ಹೊಸ ಕೋರ್ಸು, ಹೊಸ ವಿಷಯ, ಶಾಶ್ವತ ನವೀಕರಣ, ವಿಸ್ತರಣೆ ಮತ್ತು ಮುಂದುವರಿಕೆ ಸಂಲಗ್ನತೆ ಮಂಜೂರಾತಿ ಕುರಿತು ಸ್ಥಾನಿಕ ವಿಚಾರಣಾ ಸಮಿತಿಗಳು ನೀಡಿರುವ ವರದಿಯನ್ನು ಪರಿಶೀಲಿಸಿ** *ಅನುಮೋದಿಸಲಾಯಿತು.*
2. **ಕ್ರ.ಸಂ:7ರಲ್ಲಿ ಎಸ್.ಜೆ.ಎಂ.ವಿ. ಕಲಾ ಮತ್ತು ವಾಣಿಜ್ಯ ಪದವಿ ಮಹಿಳಾ ಮಹಾವಿದ್ಯಾಲಯ, ಎಂ.ಎ.ಮ್ಯೂಜಿಕ್ ಸ್ನಾತಕೋತ್ತರ ಕೋರ್ಸನ್ನು ನೀಡಲು ಪ್ರೊ.ಎಸ್.ಎ.ಕಾಜಿ, ಪ್ರಾಧ್ಯಾಪಕರು, ಸಮಾಜಕಾರ್ಯ ಅಧ್ಯಯನ ವಿಭಾಗ, ಅವರ ಅಧ್ಯಕ್ಷತೆಯಲ್ಲಿ ಮೂರು ತಜ್ಞರ ಸಮಿತಿಯನ್ನು ರಚಿಸಿ ಸದರಿ ಕಾಲೇಜಿಗೆ ಪುನ: ತಪಾಸಣೆಗೆ ಕಳುಹಿಸಲು ತೀರ್ಮಾನಿಸಲಾಯಿತು.**
3. **ಸಂಯೋಜನೆಯ ಮುಂದುವರಿಕೆಯ ಪ್ರಸ್ತಾವನೆಯನ್ನು ನೀಡದಿದ್ದ 13 ಕಾಲೇಜುಗಳ ವಿಷಯಕ್ಕೆ ಸಂಬಂಧಿಸಿದಂತೆ ಪ್ರೊ.ಆರ್.ಜಿ.ಹೆಗಡೆ ಅವರು ಕಾಲೇಜುಗಳಿಗೆ ನೋಟಿಸ್ ಅನ್ನು ನೀಡಿ ಹಾಗೂ ಸ್ಥಳೀಯ ಪತ್ರಿಕೆಗಳಲ್ಲಿ ಜಾಹಿರಾತನ್ನು ನೀಡಿ ಸದರಿ ಕಾಲೇಜುಗಳು ಸಂಯೋಜನೆ ಪ್ರಸ್ತಾವನೆಯನ್ನು ಸಲ್ಲಿಸದೆ ಇರುವುದನ್ನು ವಿದ್ಯಾರ್ಥಿ/ಪೋಷಕರ ಗಮನಕ್ಕೆ ತರಲು ಸೂಚಿಸಿದರು. ಮುಂದುವರಿದು ಕುಲಸಚಿವರು, ಈ 13 ಕಾಲೇಜುಗಳ ಪ್ರಾಂಶುಪಾಲರನ್ನು ವಿಶ್ವವಿದ್ಯಾಲಯಕ್ಕೆ ಕರೆಸಿ, ಅದರ ವಾಸ್ತವ್ಯದ ಸಂಗತಿಯನ್ನು ತಿಳಿದುಕೊಂಡು ಮುಂದಿನ ಕ್ರಮಕೈಗೊಳ್ಳ ಬೇಕೆಂದು ತೀರ್ಮಾನಿಸಲಾಯಿತು.**

**ನಿರ್ಣಯ :– ವಿದ್ಯಾವಿಷಯಕ ಪರಿಷತ್ ನಿರ್ಣಯವನ್ನು ಚರ್ಚಿಸಿ ಒಪ್ಪಿಕೊಳ್ಳಲಾಯಿತು.**

## ದಿನಾಂಕ:14–03–2017ರಂದು ಜರುಗಿದ 97ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

# *ಸಿಂಡಿಕೇಟ್ ಐಟಂ ಸಂಖ್ಯೆ: 03*

**ವಿಷಯ:** ರಾಜ್ಯದಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಸ್ನಾತಕೋತ್ತರ ಪದವಿ ಹಂತದವರಿಗೆ ಶಿಕ್ಷಣವನ್ನು ಮುಂದುವರೆಸುವ ಕುರಿತು.

**ಉಲ್ಲೇಖ:** ಸರಕಾರದ ಪತ್ರ ಸಂಖ್ಯೆ: ಇಡಿ66 ವಿವಿಧ 2016 ದಿನಾಂಕ:11–01–2017

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ರಾಜ್ಯದಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಸೌಲಭ್ಯಗಳನ್ನು ಒದಗಿಸಲು ಪ್ರಸಕ್ತ ಸಾಲಿನ ಆರ್ಥಿಕ ವರ್ಷದಲ್ಲಿ ಯಾವ ಲೆಕ್ಕಶೀರ್ಷಿಕೆಗಳಿಂದ ಉಚಿತ ಶಿಕ್ಷಣ, ವಸತಿ ನಿಲಯದ ಸೌಲಭ್ಯ ಅಥವಾ ತತ್ಸಮಾನ ಶಿಕ್ಷಣ ಶುಲ್ಕ ಮತ್ತು ವಸತಿ ವೆಚ್ಚದ ಮರುಪಾವತಿ ಮಾಡಲಾಗುತ್ತಿದೆ? ಎಂದು ಕೇಳಿರುತ್ತಾರೆ. ಹಾಗೂ ಅಂಥ ಲೆಕ್ಕಶೀರ್ಷಿಕೆಗಳಲ್ಲಿ ಏರ್ಪಾಡು ಮಾಡಿರುವ ಅನುದಾನದಿಂದಲೇ ಮೇಲೆ ತಿಳಿಸಿರುವ ಸೌಲಭ್ಯಗಳಿಗೆ ತಗಲುವ ವೆಚ್ಚವನ್ನು ಭರಿಸುವಂತೆ ನಿರ್ದೇಶಿಸಿರುತ್ತಾರೆ ಇದಕ್ಕಾಗಿ ವಿಶ್ವವಿದ್ಯಾಲಯದಲ್ಲಿ ಪ್ರತ್ಯೇಕ ಅನುದಾನ ಮೀಸಲಿಡಬೇಕಾಗುತ್ತದೆ. ಆದರೆ ಇದುವರೆಗೆ ನಮ್ಮ

ವಿಶ್ವವಿದ್ಯಾಲಯದಲ್ಲಿ ಈ ಸಂಬಂಧ ಪ್ರತ್ಯೇಕ ಅನುದಾನ ಇರುವುದಿಲ್ಲ. ಸರಕಾರದ ಪತ್ರದನ್ವಯ ಇದಕ್ಕಾಗಿ ಪ್ರತ್ಯೇಕ ಅನುದಾನ ಮೀಸಲಿಡುವ ಬಗ್ಗೆ ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**ನಿರ್ಣಯ:- ಇಂಥ ಅಭ್ಯರ್ಥಿಗಳು ತಮ್ಮ ಪಾಲಕರ ಮರಣ ಪ್ರಮಾಣ ಪತ್ರವನ್ನು ದೃಢೀಕರಿಸಿ ತಂದಲ್ಲಿ ಉಚಿತ ಶಿಕ್ಷಣ, ವಸತಿ ನಿಲಯದ ಸೌಲಭ್ಯವನ್ನು ನೀಡಲು ಪರಿಗಣಿಸಲಾಗುವುದು ಎಂದು ತೀರ್ಮಾನಿಸಲಾಯಿತು.**

## <u>ದಿನಾಂಕ:14-03-2017ರಂದು ಜರುಗಿದ 97ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>

# *ಸಿಂಡಿಕೇಟ್ ಐಟಂ ಸಂಖ್ಯೆ :04*

**ವಿಷಯ:** 2016 ನೇ ಸಾಲಿಗಾಗಿ ಬಿ.ಎಡ್ ಪ್ರಥಮ ಮತ್ತು ತೃತೀಯ ಸೆಮಿಸ್ಟರ್ ವಾರ್ಷಿಕ ಪ್ರವೇಶ ಶುಲ್ಕದ ಕುರಿತು

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, 2016-17 ನೇ ಸಾಲಿಗಾಗಿ ಮಹಿಳಾ ವಿಶ್ವವಿದ್ಯಾಲಯದಡಿಯಲ್ಲಿ ಬರುವ ಎಲ್ಲಾ ಮಹಿಳಾ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ ಬಿ.ಎಡ್ ಪ್ರಥಮ ಮತ್ತು ತೃತೀಯ ಸೆಮಿಸ್ಟರನಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿನಿಯರಿಗೆ ಪ್ರವೇಶ ಶುಲ್ಕವನ್ನು ನಿಗದಿಪಡಿಸಬೇಕಾಗಿದೆ. ಆದ್ದರಿಂದ ಪ್ರತಿ ವರ್ಷ ಪ್ರವೇಶ ಶುಲ್ಕಗಳಲ್ಲಿ ಶೇ. 10% ರಷ್ಟು ಹೆಚ್ಚಿಸುತ್ತ ಬಂದಿರುತ್ತೇವೆ. ಆದ್ದರಿಂದ ಈ ಕೆಳಕಂಡ ವಿವರಗಳೊಂದಿಗೆ ಬಿ.ಎಡ್ ಪ್ರಥಮ ಮತ್ತು ತೃತೀಯ ಸೆಮಿಸ್ಟರಗಳ ಪ್ರವೇಶ ಶುಲ್ಕವನ್ನು ಹೆಚ್ಚಿಸಲು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ಮಹಿಳಾ ವಿಶ್ವವಿದ್ಯಾಲಯದಡಿಯಲ್ಲಿ ಬರುವ ಎಲ್ಲಾ ಮಹಿಳಾ ಶಿಕ್ಷಣ ಮಹಾವಿದ್ಯಾಲಯಗಳಿಗೆ ಅನ್ವಯವಾಗುವ ಶುಲ್ಕದ ವಿವರ**

| S.N | Fee structure | 2015-16 ನೇ ಸಾಲಿನ ಪ್ರವೇಶ ಶುಲ್ಕದ ವಿವರ | | 2016-17 ನೇ ಸಾಲಿಗಾಗಿ ಶೇ.10% ಪ್ರವೇಶ ಶುಲ್ಕ ಹೆಚ್ಚಿಸುವ ವಿವರ | | ಈ ವರ್ಷದಿಂದ ಹೊಸದಾಗಿ ಮಾಡಬೇಕಾದ ಶುಲ್ಕ |
|---|---|---|---|---|---|---|
| | | Within Karnataka | Outside Karnataka | Within Karnataka | Outside Karnataka | For III$^{rd}$ Semester |
| | | For Ist Semester | | For Ist Semester | | |
| 1 | On-line admission processing fee/ Eligibility form Fee | 80/- | 80/- | 90/- | 90/- | --- |
| 2 | Eligibility Fees for Ist Semester | 790/- | 3230/- | 870/- | 3560/- | --- |
| 3 | Continuation fees for IIIrd Sem | --- | --- | --- | --- | 870/- |
| 4 | Registration Fee | 940/- | 940/- | 1040/- | 1040/- | --- |
| 5 | Sports Fee | 170/- | 170/- | 190/- | 190/- | 190/- |
| 6 | Career Guidance Fee | 90/- | 90/- | 100/- | 100/- | 100/- |
| 7 | K.S.W.U.V students welfare Fund | 90/- | 90/- | 100/- | 100/- | 100/- |
| 8 | Corpus Fund | 200/- | 200/- | 200/- | 200/- | --- |
| | **Total** | **2360/-** | **4800/-** | **2590/-** | **5280/-** | **1260/-** |

| ಮಹಿಳಾ ವಿಶ್ವವಿದ್ಯಾಲಯದ ಬಿ.ಎಡ್ ವಿಭಾಗಕ್ಕೆ ಮಾತ್ರ ಅನ್ವಯವಾಗುವ ಶುಲ್ಕ | | | | |
|---|---|---|---|---|
| | | **2015–16 ನೇ ಸಾಲಿನ ಪ್ರವೇಶ ಶುಲ್ಕದ ವಿವರ** | **2016–17 ನೇ ಸಾಲಿಗಾಗಿ ಶೇ.10% ಪ್ರವೇಶ ಶುಲ್ಕ ಹೆಚ್ಚಿಸುವ ವಿವರ** | **ಈ ವರ್ಷದಿಂದ ಹೊಸದಾಗಿ ಮಾಡಬೇಕಾದ ಶುಲ್ಕ** |
| S.N | Fee Particulars | For Ist Sem | For Ist Semester | For IIIrd Sem |
| 1 | Students union and co-curricular activities fee | 140/- | 160/- | --- |
| 2 | Annual Day Celebration fee | 260/- | 290/- | --- |
| 3 | Valedictory function fee | 140/- | 160/- | --- |
| 4 | Alumini Association fee | 200/- | 220/- | --- |
| 5 | Computer fee | 260/- | 290/- | 290/- |
| 6 | Magazine fee | 200/- | 220/- | 220/- |
| | **Total Fees** | 1200/- | 1340/- | 510/- |

*ನಿರ್ಣಯ:– ಅನುಮೋದಿಸಲಾಯಿತು.*

## ದಿನಾಂಕ:14–03–2017ರಂದು ಜರುಗಿದ 97ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

# *ಸಿಂಡಿಕೇಟ್ ಐಟಂ ಸಂಖ್ಯೆ :05*

**ವಿಷಯ:** 2017–18ನೆಯ ಶೈಕ್ಷಣಿಕ ವರ್ಷದ ಸ್ನಾತಕ ಕೋರ್ಸುಗಳ ಕನ್ನಡ ಪಠ್ಯಪುಸ್ತಕಗಳನ್ನು ಹೊಸದಾಗಿ ಸಿದ್ಧಪಡಿಸುವ ಸಲುವಾಗಿ ಫೆಬ್ರುವರಿ 27 & 28, 2017ರಂದು ಕನ್ನಡ ಸ್ನಾತಕ ವಿಶೇಷ ಅಧ್ಯಯನ ಮಂಡಳಿ ಸಭೆಯನ್ನು ಜರುಗಿಸಲಾಗಿತ್ತು. ಸದರಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:– ಗೌರವಧನವನ್ನು ಈ ಕೆಳಕಂಡತೆ ಪಾವತಿಸಲು ಸರ್ವಾನುಮತದಿಂದ ಅನುಮೋದಿಸಲಾಯಿತು.*

1. *ಪ್ರಧಾನ ಸಂಪಾದಕರಿಗೆ – ರೂ.2000/–*
2. *ಸಂಪಾದಕರಿಗೆ – ರೂ.5000/–*
3. *ಪ್ರತಿ ಕವನಕ್ಕೆ – ರೂ.700/–*
4. *ಲೇಖನ ವಿಚಾರ ವಿಮರ್ಶೆ/ಸಣ್ಣಕಥೆ – ರೂ. 1200*
5. *ನಾಟಕ ಅಥವಾ ನಾಟಕವೊಂದರ ಭಾಗ/ ಕಾದಂಬರಿ ಅಥವಾ ಕಾದಂಬರಿಯೊಂದರ ಭಾಗ ರೂ.3000/–.*

## ದಿನಾಂಕ:14–03–2017ರಂದು ಜರುಗಿದ 97ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

# *ಸಿಂಡಿಕೇಟ್ ಐಟಂ ಸಂಖ್ಯೆ : 06*

ವಿಷಯ:– ಅವಧಿ ಮೀರಿದ ಉತ್ತರ ಪತ್ರಿಕೆ, ಬಿಡಿ ಕಾಗದ ಮತ್ತು ಬ್ಲೂಬುಕ್‌ಗಳನ್ನು ಮಾರಲು ಟೆಂಡರ ಅಧಿಸೂಚನೆ ಹೊರಡಿಸುವ ಕುರಿತು.

*ನಿರ್ಣಯ:–* **ಪರೀಕ್ಷಾ ವಿಭಾಗದ ಮೇ/ಜೂನ್ 2016ರ ವರೆಗಿನ ಅವಧಿ ಮೀರಿದ ಉತ್ತರ ಪತ್ರಿಕೆ, ಬಿಡಿ ಕಾಗದ ಮತ್ತು ಬ್ಲೂಬುಕ್‌ಗಳನ್ನು ಟೆಂಡರ ಮುಖಾಂತರ ವಿಲೇವಾರಿ ಮಾಡಲು ಅನುಮೋದಿಸಲಾಯಿತು.**

## ದಿನಾಂಕ:14–03–2017ರಂದು ಜರುಗಿದ 97ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

## *ಸಿಂಡಿಕೇಟ್ ಐಟಂ ಸಂಖ್ಯೆ : 07*

ದಿನಾಂಕ:09.01.2017 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದಂತೆ, ಯುಜಿಸಿ ವೇತನ ಪಡೆಯುವ ಹಾಗೂ ಯುಜಿಸಿ ವೇತನ ಪಡೆಯದ ಸ್ನಾತಕ ಹಾಗೂ ಸ್ನಾತಕೋತ್ತರ ಬೋಧಕ ಸಿಬ್ಬಂದಿಗಳಿಗೆ ಆಂತರಿಕ ಹಾಗೂ ಬಾಹ್ಯ ಹಿರಿಯ ಮೇಲ್ವಿಚಾರಕರಾಗಿ ಥಿಯರಿ ಹಾಗೂ ಪ್ರಾಯೋಗಿಕ ಪರೀಕ್ಷೆಗಳಲ್ಲಿ ಕಾರ್ಯ ನಿರ್ವಹಿಸಲು ಪ್ರಸ್ತುತ ದಿನ ಭತ್ಯೆಯನ್ನು ಪರಿಷ್ಕೃತಗೊಳಿಸಲಾಗಿದ್ದು ಹಾಗೂ ಕನಿಷ್ಠ ಉತ್ತರ ಪತ್ರಿಕೆಗಳಿಗೆ ನೀಡುವ ಸಂಭಾವನೆಯನ್ನು ನಿಗದಿ ಪಡಿಸಿದ್ದು ಅವುಗಳನ್ನು ಜಾರಿಗೆ ತರಲು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

| ಕ್ರ ಸಂ | ವಿವರ | | | **ಪ್ರಸ್ತುತದರ** | **ಪರಿಷ್ಕೃತ ದರ** |
|---|---|---|---|---|---|
| 01 | UGC ವೇತನದ ಹಿರಿಯ ಪರೀಕ್ಷಾ ಮೇಲ್ವಿಚಾರಕರು ಇವರಿಗೆ | ಆಂತರಿಕ ಹಿರಿಯ ಮೇಲ್ವಿಚಾರಕರು (ಸ್ಥಳೀಯ) Internal Sr. Supervisor | UG/PG ದಿನಭತ್ಯೆ | **350=00** | 400=00 |
| 02 | UGC ವೇತನದ ಹಿರಿಯ ಪರೀಕ್ಷಾ ಮೇಲ್ವಿಚಾರಕರು ಇವರಿಗೆ | ಬಾಹ್ಯ ಹಿರಿಯ ಮೇಲ್ವಿಚಾರಕರು External Sr. Supervisor | ದಿನಭತ್ಯೆ | **ರೂ.450=00** | **500=00** |
| 03 | NON UGC ವೇತನದ ಹಿರಿಯ ಪರೀಕ್ಷಾ ಮೇಲ್ವಿಚಾರಕರು ಇವರಿಗೆ | ಆಂತರಿಕ ಹಿರಿಯ ಮೇಲ್ವಿಚಾರಕರು (ಸ್ಥಳೀಯ) Internal Sr. Supervisor | ದಿನಭತ್ಯೆ | **ರೂ.400=00** | **500=00** |
| 04 | NON UGC ವೇತನದ ಹಿರಿಯ ಪರೀಕ್ಷಾ ಮೇಲ್ವಿಚಾರಕರು ಇವರಿಗೆ | ಬಾಹ್ಯಹಿರಿಯ ಮೇಲ್ವಿಚಾರಕರು External Sr. Supervisor | ದಿನಭತ್ಯೆ | **ರೂ.500=00** | **600=00** |

**ಪ್ರಾಯೋಗಿಕ ಪರೀಕ್ಷಕರಿಗೆ**

| | | | | | |
|---|---|---|---|---|---|
| 01 | ಪ್ರಾಯೋಗಿಕ ಪರೀಕ್ಷಕರು (UG/PG) | Internal ಸ್ಥಳೀಯ ಸ್ಥಳಗಳಲ್ಲಿ(Local) | ದಿನಭತ್ಯೆ | **ರೂ.400=00** | **500=00** |
| 02 | ಪ್ರಾಯೋಗಿಕ ಪರೀಕ್ಷಕರು (UG/PG) | ಬಾಹ್ಯ External | ದಿನಭತ್ಯೆ | **ರೂ.700=00** | **1000=00** |

**ಕನಿಷ್ಠ ಉತ್ತರ ಪತ್ರಿಕೆಗಳ ಸಂಭಾವನೆ**

1. 3 ತಾಸುಗಳ ಅವಧಿಯ ಕನಿಷ್ಠ 9 ಉತ್ತರ ಪತ್ರಿಕೆಗಳಿಗಿಂತ ಕಡಿಮೆ ಇರುವ ಉತ್ತರ ಪತ್ರಿಕೆಗಳಿಗೆ ರೂ.100/–ಗಳನ್ನು ಸಂಭಾವನೆ ನೀಡುವುದು.
2. 3 ತಾಸುಗಳಿಗಿಂತ ಕಡಿಮೆ ಇರುವ ಕನಿಷ್ಠ 20 ಉತ್ತರ ಪತ್ರಿಕೆಗಳ ಮೌಲ್ಯಮಾಪನಕ್ಕೆ ರೂ.100/– ಗಳನ್ನು ಸಂಭಾವನೆ ನೀಡುವುದು.

**ನಿರ್ಣಯ:– ಅನುಮೋದಿಸಲಾಯಿತು.**

## ದಿನಾಂಕ:14–03–2017ರಂದು ಜರುಗಿದ 97ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

# *ಸಿಂಡಿಕೇಟ್ ಐಟಂ ಸಂಖ್ಯೆ : 08*

ವಿಷಯ: Smt.Chandrakala Goutham Chand Bumb, Sindhanur ಇವರ ಹೆಸರಿನಿಂದ ಚಿನ್ನದ ಪದಕ ನೀಡುವ ಕುರಿತು.

ಮಾನ್ಯ ಶ್ರೀ.ಆರ್.ಸಿ ಪಾಟೀಲ್, ಸಿಂಡಿಕೇಟ್ ಸದಸ್ಯರು ಕರ್ನಾಟಕ ರಾಜ್ಯ ಮಹಿಳಾ ವಿಜಯಪುರ ಹಾಗೂ ಚಿನ್ನದ ಪದಕ ದಾನಿಗಳು ಇವರು M.Sc Food Processing and Nutrition ಕೋರ್ಸಿಗೆ ನಾಲ್ಕು ಸೆಮಿಸ್ಟರಗಳಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮವಾಗಿ ತೇರ್ಗಡೆ ಹೊಂದಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿನಿಗೆ Smt.Chandrakala Goutham Chand Bumb, Sindhanur ರವರ ಹೆಸರಿನಿಂದ ಚಿನ್ನದ ಪದಕ ನೀಡಲು ಠೇವಣಿ ವಂತಿಗೆ ರೂ. 50,000/– ಮತ್ತು ಚಿನ್ನದ ಪದಕ ತಯಾರಿಕಾ ವೆಚ್ಚ ರೂ. 5000/- ಸೇರಿಸಿ ಒಟ್ಟು ರೂ. 55000/- ಗಳ ಚೆಕ್ಕನ್ನು ದಿನಾಂಕ: 23-02-2017 ರಂದು ವಿಶ್ವವಿದ್ಯಾಲಯಕ್ಕೆ ನೀಡಿರುತ್ತಾರೆ. ಕಾರಣ ಶೈಕ್ಷಣಿಕ ವರ್ಷ 2016-17 ರಿಂದ ಚಿನ್ನದ ಪದಕ ನೀಡಲು ಸಿಂಡಿಕೇಟ್ ಸಭೆಯಲ್ಲಿ ಒಪ್ಪಿಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಲಾಗಿದೆ.

***ನಿರ್ಣಯ:–***

**M.Sc Food Processing and Nutrition ಕೋರ್ಸಿಗೆ ನಾಲ್ಕು ಸೆಮಿಸ್ಟರಗಳಲ್ಲಿ ಪ್ರಥಮ ಪ್ರಯತ್ನದಲ್ಲಿ, ಪ್ರಥಮವಾಗಿ ತೇರ್ಗಡೆ ಹೊಂದಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿನಿಗೆ Smt.Chandrakala Goutham Chand Bumb, Sindhanur ಅವರ ಹೆಸರಿನಿಂದ ಚಿನ್ನದ ಪದಕ ನೀಡಲು ಅನುಮೋದಿಸಲಾಯಿತು.**

## ದಿನಾಂಕ:14–03–2017ರಂದು ಜರುಗಿದ 97ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

# *ಸಿಂಡಿಕೇಟ್ ಐಟಂ ಸಂಖ್ಯೆ : 09*

**ವಿಷಯ: Late. Prof.M.B.Dilshad ಇವರ ಹೆಸರಿನಿಂದ ಚಿನ್ನದ ಪದಕ ನೀಡುವ ಕುರಿತು.**

ಶ್ರೀಮತಿ ಮರಿಯಮ್ಮ ಎಮ್.ದಿಲಷಾದ, ಇಳಕಲ್ ಬಿಲ್ಡಿಂಗ್, ವಿವೇಕ ನಗರ, ವಿಜಯಪುರ. ಇವರು ಮಹಿಳಾ ಅಧ್ಯಯನ ವಿಭಾಗದ Feminist Theory ಪತ್ರಿಕೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮವಾಗಿ ತೇರ್ಗಡೆ ಹೊಂದಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿನಿಗೆ Late. Prof.M.B.Dilshad ರವರ ಹೆಸರಿನಿಂದ ಚಿನ್ನದ ಪದಕ ನೀಡಲು ಕೇಳಿಕೊಂಡು ಠೇವಣಿ ವಂತಿಗೆ ರೂ. 50,000/– ಮತ್ತು ಚಿನ್ನದ ಪದಕ ತಯಾರಿಕಾ ವೆಚ್ಚ ರೂ.

5000/- ಸೇರಿಸಿ ಒಟ್ಟು ರೂ. 55000/- ಗಳ ಚೆಕ್ಕನ್ನು ದಿನಾಂಕ: 27-02-2017 ರಂದು ವಿಶ್ವವಿದ್ಯಾಲಯಕ್ಕೆ ನೀಡಿರುತ್ತಾರೆ. ಕಾರಣ ಶೈಕ್ಷಣಿಕ ವರ್ಷ 2016-17 ರಿಂದ ಚಿನ್ನದ ಪದಕ ನೀಡಲು ಸಿಂಡಿಕೇಟ್ ಸಭೆಯಲ್ಲಿ ಒಪ್ಪಿಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಲಾಗಿದೆ.

**ನಿರ್ಣಯ:–**

**೧. ಮಹಿಳಾ ಅಧ್ಯಯನ ವಿಭಾಗದ Feminist Theory ಪತ್ರಿಕೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮವಾಗಿ ತೇರ್ಗಡೆ ಹೊಂದಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿನಿಗೆ Late. Prof.M.B.Dilshad ರವರ ಹೆಸರಿನಿಂದ ಚಿನ್ನದ ಪದಕ ನೀಡಲು ಅನುಮೋದಿಸಲಾಯಿತು.**

**2. ಈ ವಿಷಯ ಕುರಿತು ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀ.ಆರ್.ಸಿ.ಪಾಟೀಲ ಅವರು ಒಂದೆ ವಿಷಯಕ್ಕೆ ಒಂದಕ್ಕಿಂತ ಹೆಚ್ಚು ವಿದ್ಯಾರ್ಥಿನಿಯರು ರ್‍ಯಾಂಕ/ಚಿನ್ನದ ಪದಕವನ್ನು ಪಡೆದರೆ ಅವರಿಗೆಲ್ಲ ವಿಶ್ವವಿದ್ಯಾಲಯದ ಆರ್ಥಿಕ ಸಂಪನ್ಮೂಲದಿಂದ ರ್‍ಯಾಂಕ/ಚಿನ್ನದ ಪದಕವನ್ನು ನೀಡಲು ಸೂಚಿಸಿದರು. ಇದಕ್ಕೆ ಎಲ್ಲ ಸದಸ್ಯರು ಒಪ್ಪಿಕೊಂಡರು. ಈ ವಿಷಯ ಕುರಿತು ಪರಿನಿಯಮಾವಳಿಯನ್ನು ತಯಾರಿಸಲು ತೀರ್ಮಾನಿಸಲಾಯಿತು. ಪರಿನಿಯಮಾವಳಿ ಘನತೆವೆತ್ತ ಕುಲಾಧಿಪತಿಗಳಿಂದ ಅನುಮೋದನೆಗೊಂಡು ಬರುವವರೆಗೆ ಪ್ರಸ್ತುತ ಜಾರಿಯಲ್ಲಿರುವ ಕ್ರಮವನ್ನು ಮುಂದುವರಿಸುವುದು.**

## <u>ದಿನಾಂಕ:14–03–2017ರಂದು ಜರುಗಿದ 97ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>

## *ಸಿಂಡಿಕೇಟ್ ಐಟಂ ಸಂಖ್ಯೆ : 10*

**ವಿಷಯ: Prof.M.S.Kallur Memorial ಇವರ ಹೆಸರಿನಿಂದ ಚಿನ್ನದ ಪದಕ ನೀಡುವ ಕುರಿತು.**

ಡಾ.ಎಮ್.ಎಸ್.ಕಲ್ಲೂರ, ನಿವೃತ್ತ ಪ್ರಾಧ್ಯಾಪಕರು, ವೀರೇಂದ್ರ ಪಾಟೀಲ್ ಬಡಾವಣೆ ವಿಶ್ವವಿದ್ಯಾಲಯ ರಸ್ತೆ ಕಲಬುರ್ಗಿ ಅವರು ಅರ್ಥಶಾಸ್ತ್ರ ಅಧ್ಯಯನ ವಿಭಾಗಕ್ಕೆ ನಾಲ್ಕು ಸೆಮಿಸ್ಟರನಲ್ಲಿ ಪ್ರಯತ್ನದಲ್ಲಿ ಪ್ರಥಮವಾಗಿ ತೇರ್ಗಡೆ ಹೊಂದಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿನಿಗೆ Prof. M.S.Kallur Memorial ರವರ ಹೆಸರಿನಿಂದ ಚಿನ್ನದ ಪದಕ ನೀಡಲು ಕೇಳಿಕೊಂಡು ಠೇವಣಿ ವಂತಿಗೆ ರೂ. 50,000/– ಮತ್ತು ಚಿನ್ನದ ಪದಕ ತಯಾರಿಕಾ ವೆಚ್ಚ ರೂ. 5000/- ಸೇರಿಸಿ ಒಟ್ಟು ರೂ. 55000/- ಗಳ ಚೆಕ್ಕನ್ನು ದಿನಾಂಕ: 27-02-2017 ರಂದು ವಿಶ್ವವಿದ್ಯಾಲಯಕ್ಕೆ ನೀಡಿರುತ್ತಾರೆ. ಕಾರಣ ಶೈಕ್ಷಣಿಕ ವರ್ಷ 2016-17 ರಿಂದ ಚಿನ್ನದ ಪದಕ ನೀಡಲು ಸಿಂಡಿಕೇಟ್ ಸಭೆಯಲ್ಲಿ ಒಪ್ಪಿಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಲಾಗಿದೆ.

**ನಿರ್ಣಯ:–**

**ಅರ್ಥಶಾಸ್ತ್ರ ಅಧ್ಯಯನದ ನಾಲ್ಕು ಸೆಮಿಸ್ಟರನಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮವಾಗಿ ತೇರ್ಗಡೆ ಹೊಂದಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿನಿಗೆ Prof. M.S.Kallur Memorial ಅವರ ಹೆಸರಿನಿಂದ ಚಿನ್ನದ ಪದಕ ನೀಡಲು ಅನುಮೋದಿಸಲಾಯಿತು.**

## <u>ದಿನಾಂಕ:14–03–2017ರಂದು ಜರುಗಿದ 97ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>

## *ಸಿಂಡಿಕೇಟ್ ಐಟಂ ಸಂಖ್ಯೆ : 11*

ದಿನಾಂಕ: 27–02–2017ರಂದು ಜರುಗಿದ Malpractice Consideration Committee (Employees) ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಸಿದೆ.

ನಿರ್ಣಯ:–

1. **Malpractice Consideration Committee (Employees) ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸಲಾಯಿತು.**
2. **ರೆಜಿಸ್ಟರ್ ನಂ 15416041, 15414835, 15414836 ಇರುವ ಅಭ್ಯರ್ಥಿಗೆ ಮೂಲ ಅಂಕವನ್ನು ನಮೂದಿಸಿ ಪರಿಷ್ಕೃತ ಅಂಕಪಟ್ಟಿಯನ್ನು ನೀಡಲು ತೀರ್ಮಾನಿಸಲಾಯಿತು.**
3. **ಮೌಲ್ಯಮಾಪಕರಿಗೆ ಹಾಗೂ ರಿವ್ಯೂವರ್ (Reviewer)ಗಳಿಗೆ ಕರ್ನಾಟಕ ರಾಜ್ಯ ಅಧಿನಿಯಮ 2000 ಪ್ರಕರಣ 74(2)ರ ಅನ್ವಯ ರೂ.2000/– ದಂಡ ಹಾಗೂ ಒಂದು ವರ್ಷ ಅವರಿಗೆ ಪರೀಕ್ಷ ಕಾರ್ಯಗಳಿಂದ ವಿಮುಕ್ತಗೊಳಿಸಲು ತೀರ್ಮಾನಿಸಲಾಯಿತು.(ಮೇ–ಜೂನ್–2017 ರಿಂದ ಮೇ–ಜೂನ್–2018ರ ವರೆಗೆ)**



## *ಸಿಂಡಿಕೇಟ್ ಐಟಂ ಸಂಖ್ಯೆ : 12*

ವಿಷಯ: ಮಹಿಳಾ ವಿಶ್ವವಿದ್ಯಾಲಯದ ಪ.ಜಾ/ಪ.ಪಂ ಖಾಯಂ ಅಧ್ಯಾಪಕರುಗಳಿಗೆ ಹಾಗೂ ಸಂಶೋಧನಾ ವಿದ್ಯಾರ್ಥಿನಿಯರಿಗೆ ಅಮೇರಿಕಾದ ಕೊಲಂಬಿಯಾ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಲು ಅನುಮತಿಸುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಮಹಿಳಾ ವಿಶ್ವವಿದ್ಯಾಲಯದಲ್ಲಿ ದಿನಾಂಕ:11–11–2016ರಂದು ಜರುಗಿದ ಸಿಂಡಿಕೇಟ್ ಸಭೆಯ ಪುರವಣಿ ಸಂಖ್ಯೆ:02ರ ಪ್ರಕಾರ ದಿನಾಂಕ:18–10–2016ರಂದು ಜರುಗಿದ ಪ.ಜಾ/ಪ.ಪಂ ಘಟಕದ ವತಿಯಿಂದ ಜರುಗಿದ ಸಲಹಾ ಸಮಿತಿ ಸಭೆಯ ಎಲ್ಲ ನಡವಳಿಗಳನ್ನು ಅನುಮೋದಿಸಲಾಯಿತು. ಸಲಹಾ ಸಮಿತಿ ಸಭೆಯ ಅಜೆಂಡಾ ಸಂಖ್ಯೆ: 3&4ರ ಪ್ರಕಾರ ಮಹಿಳಾ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ.ಜಾ/ಪ.ಪಂ ಖಾಯಂ ಅಧ್ಯಾಪಕರುಗಳಿಗೆ ಅಂತರ್‌ರಾಷ್ಟ್ರೀಯ ಮತ್ತು ರಾಷ್ಟ್ರೀಯ ಸಮ್ಮೇಳನಗಳು, ಕಾರ್ಯಗಾರಗಳು, ವಿಶ್ವವಿಖ್ಯಾತ ವಿದ್ಯಾಸಂಸ್ಥೆಗಳನ್ನು ಸಂದರ್ಶಿಸಲು ಮತ್ತು ವಿಚಾರ ಸಂಕಿರಣಗಳಲ್ಲಿ ಭಾಗವಹಿಸಲು ಪ್ರಾಧ್ಯಾಪಕರುಗಳಿಗೆ ಯು.ಜಿ.ಸಿ ನಿಯಮಾವಳಿಯ ಪ್ರಕಾರ ದಿನಭತ್ಯೆ, ಪ್ರಯಾಣಭತ್ಯೆ, ನೊಂದಣಿ ಶುಲ್ಕ ಮತ್ತು ವೀಸಾ ಶುಲ್ಕಗಳಿಗೆ ಧನಸಹಾಯ ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಕಾರಣ ಮಹಿಳಾ ವಿಶ್ವವಿದ್ಯಾಲಯದ ಪ.ಜಾ/ಪ.ಪಂ ಒಟ್ಟು 07ಖಾಯಂ ಪ್ರಾಧ್ಯಾಪಕರು ಹಾಗೂ ಪ.ಜಾ/ಪ.ಪಂದ ಒಟ್ಟು 09 ಪೂರ್ಣಕಾಲಿಕ ಸಂಶೋಧನಾ ವಿದ್ಯಾರ್ಥಿನಿಯರು ಸೇರಿ ಒಟ್ಟು 16 ಜನರು ಕೊಲಂಬಿಯಾ ವಿಶ್ವವಿದ್ಯಾಲಯವನ್ನು ಸಂದರ್ಶಿಸಲು ಅನುಮತಿಸಿ ಅದಕ್ಕೆ ತಗಲುವ ಅಂದಾಜು ಖರ್ಚು ರೂ.48,22,944/–(ರೂ.ನಲವತ್ತೆಂಟು ಲಕ್ಷದ ಇಪ್ಪತ್ತೆರಡು ಸಾವಿರದಾ ಒಂಬೈನೂರಾ ನಲವತ್ತನಾಲ್ಕು ಮಾತ್ರ) ಆಗುವ ಸಾಧ್ಯತೆ ಇದ್ದು. ಕಾರಣ ಅದನ್ನು ಮಂಜೂರಿಸಲು ಹಾಗೂ ಅನುಮತಿಸಲು ವಿನಂತಿಸಿ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿದೆ.

*ನಿರ್ಣಯ:–*

*1.ವಿಶ್ವವಿದ್ಯಾಲಯದ ಪ್ರಾಧ್ಯಾಪಕರುಗಳಿಗೆ ನಿಯಮಾನುಸಾರ ಪ್ರಯಾಣ ಭತ್ಯೆ, ದಿನಭತ್ಯೆ ಹಾಗೂ ನೊಂದಣಿ ಶುಲ್ಕವನ್ನು ನೀಡಲು ತೀರ್ಮಾನಿಸಲಾಯಿತು.*

*2. ಸಂಶೋಧನಾ ವಿದ್ಯಾರ್ಥಿನಿಯರಿಗೆ ನಿಯಮವನ್ನು ಸಡಿಲಿಕೆ ಮಾಡಿ. ಅವರಿಗೆ ಸಂಪೂರ್ಣ ಆರ್ಥಿಕ ನೆರವು ನೀಡಲು ನಿರ್ಣಯಿಸಲಾಯಿತು.*

**ದಿನಾಂಕ:14–03–2017ರಂದು ಜರುಗಿದ 97ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ : 13*

ವಿಷಯ: ದಿನಾಂಕ:13–02–2017ರಂದು ಜರುಗಿದ ಮಹಿಳಾ ಅಧ್ಯಯನ ಕೇಂದ್ರದ ಸಲಹಾ

ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:– ಮಹಿಳಾ ಅಧ್ಯಯನ ಕೇಂದ್ರದ ಸಲಹಾ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸಲಾಯಿತು.**

**<u>ದಿನಾಂಕ:14–03–2017ರಂದು ಜರುಗಿದ 97ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>**

## *ಸಿಂಡಿಕೇಟ್ ಐಟಂ ಸಂಖ್ಯೆ :14*

**ಸಿಂಡಿಕೇಟ್ ಸದಸ್ಯರಾದ ಮಾನ್ಯ ಶ್ರೀನಿವಾಸ ಬಳ್ಳಿ ಅವರು ಈ ಕೆಳಕಂಡ ಪ್ರಸ್ತಾವನೆ ಸಲ್ಲಿಸಿರುತ್ತಾರೆ.**

ಪ್ರತಿ ಸಿಂಡಿಕೇಟ್ ಸಭೆಯಲ್ಲಿಯೂ ವಿಶ್ವವಿದ್ಯಾಲಯದ ಮೂಲಭೂತ ಸೌಕರ್ಯಗಳು, ಶೈಕ್ಷಣಿಕ ವಿಕಾಸ, ಗುಣಮಟ್ಟ ನಿಯಂತ್ರಣ ಇತ್ಯಾದಿ ವಿಷಯಗಳನ್ನು ಕುರಿತಂತೆ ಅನೇಕ ನಿರ್ಣಯಗಳನ್ನು ಕೈಗೊಳ್ಳಲಾಗುತ್ತಿದೆ. ಪ್ರತಿ ಸಭೆಯಲ್ಲಿಯೂ ಹಿಂದಿನ ಸಭೆಯಲ್ಲಿ ದೃಡಿಕರಿಸಲ್ಪಟ್ಟ ನಡಾವಳಿಗಳ ಮೇಲೆ ತೆಗೆದುಕೊಂಡ ಕ್ರಮಗಳ ವರದಿಯನ್ನ ಮಂಡಿಸಲಾಗುತ್ತದೆ. ಆದಾಗ್ಯೂ ವಿಶ್ವವಿದ್ಯಾಲಯ ಸಿಂಡಿಕೇಟ್ ಸಭೆಯು ತೆಗೆದುಕೊಂಡ ನಿರ್ಣಯದಂತೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವಲ್ಲಿ ತುಂಬ ವಿಳಂಬವಾಗುತ್ತಿದೆ. ಹೆಚ್ಚು ನಿರ್ಣಯಗಳು ಬರೀ ಕಾಗದದಲ್ಲಿ ಉಳಿಯುತ್ತದೆ ಎನ್ನುವ ಭಾವನೆ ಎಲ್ಲ ಸಿಂಡಿಕೇಟ್ ಸದಸ್ಯರಲ್ಲಿ ಇದೆ. ಅನೇಕ ನಿರ್ಣಯಗಳನ್ನು ಕಾರ್ಯಗತಗೊಳಿಸುವಲ್ಲಿಯೂ ಬದ್ಧತೆಯ ಕೊರತೆ ಕಾಣುತ್ತಿದೆ. ಅದಕ್ಕಾಗಿ ವಿಶ್ವವಿದ್ಯಾಲಯ ಸಿಂಡಿಕೇಟ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳ ಸೂಕ್ತ ಅನುಷ್ಠಾನಕ್ಕಾಗಿ ಸಿಂಡಿಕೇಟ್ ಸದಸ್ಯರ ಅಧ್ಯಕ್ಷತೆಯಲ್ಲಿ ಒಂದು **ನಿರ್ಣಯ ಅನುಷ್ಠಾನ ಕಾವಲು ಸಮಿತಿ**ಯನ್ನು ರಚಿಸಬೇಕು. ಸಮಿತಿಯಲ್ಲಿ ಮಾನ್ಯ ಕುಲಪತಿಗಳು, ಕುಲಸಚಿವರು, ಮೌಲ್ಯಮಾಪನ ಕುಲಸಚಿವರು ಮತ್ತು 3 ಜನ ಸಿಂಡಿಕೇಟ ಸದಸ್ಯರನ್ನು ಒಳಗೊಂಡಿರಬೇಕು. ನಿರ್ಣಯ ಅನುಷ್ಠಾನ ಕಾವಲು ಸಮಿತಿಯ ಕಾರ್ಯ: ಈ ಸಮಿತಿಯ ಪ್ರತಿ 3 ತಿಂಗಳಿಗೊಮ್ಮೆ ಸಭೆ ಸೇರಿ ವಿಶ್ವವಿದ್ಯಾಲಯ ಸಿಂಡಿಕೇಟ್ ನಿರ್ಣಯಗಳ ಮೇಲೆಕ್ರಮ ಕೈಗೊಂಡ ಬಗ್ಗೆ ಪರಾಮರ್ಶಿಸುವದು ಮತ್ತು ಸೂಕ್ತ ಮಾರ್ಗದರ್ಶನ ನೀಡುವುದು, ಕ್ರಮ ತೆಗೆದುಕೊಳ್ಳದ ಪಕ್ಷದಲ್ಲಿ ಸಂಬಂಧಿಸಿದವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಲು ವಿಶ್ವವಿದ್ಯಾಲಯದ ಸಿಂಡಿಕೇಟಗೆ ಶಿಫಾರಸು ಮಾಡುವದು. ಈ ವಿಷಯವನ್ನು ಸಭೆಯ ಅವಗಾಹನೆ ಹಾಗೂ ಮುಂದಿನ ಸೂಕ್ತ ನಿರ್ದೇಶಕ್ಕಾಗಿ ಮಂಡಿಸಿದೆ.

ನಿರ್ಣಯ:–

**ಈ ವಿಷಯ ಕುರಿತು ಸುದೀರ್ಘವಾಗಿ ಚರ್ಚಿಸಿ ಈಗಾಗಲೇ ವಿಶ್ವವಿದ್ಯಾಲಯದ ಮೂಲಭೂತ ಸೌಕರ್ಯಗಳು, ಶೈಕ್ಷಣಿಕ ವಿಕಾಸ, ಗುಣಮಟ್ಟ ನಿಯಂತ್ರಣಕ್ಕೆ ಕರ್ನಾಟಕ ರಾಜ್ಯ ಅಧಿನಿಯಮ 2000 ಪ್ರಕರಣ 35(2) ಯೋಜನಾ ಮೇಲ್ವಿಚಾರಣೆ & ಮೌಲ್ಯಮಾಪನ ಮಂಡಳಿ ಸಮಿತಿ ಇದೆ. ಅದರ ಪುನರ್ ರಚನೆಗೆ ಕ್ರಮಕೈಗೊಳ್ಳಲು ತೀರ್ಮಾನಿಸಲಾಯಿತು.**

**<u>ದಿನಾಂಕ:14–03–2017ರಂದು ಜರುಗಿದ 97ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>**

## *ಸಿಂಡಿಕೇಟ್ ಐಟಂ ಸಂಖ್ಯೆ : 15*

**ಸಿಂಡಿಕೇಟ್ ಸದಸ್ಯರಾದ ಪ್ರೊ.ಮಹೇಶ ಚಿಂತಾಮಣಿ ಅವರು ಈ ಕೆಳಕಂಡ ಪ್ರಸ್ತಾವನೆ ಸಲ್ಲಿಸಿರುತ್ತಾರೆ.**

ವಿಷಯ:– ವಿಶ್ವವಿದ್ಯಾಲಯದ ಪರೀಕ್ಷಾ ಕಾರ್ಯಗಳಿಗಾಗಿ ಲಾಜಿಸಿಸ್ ಸಂಸ್ಥೆಯೊಂದಿಗೆ ಮಾಡಿಕೊಂಡ ಒಪ್ಪಂದದ ರದ್ದತಿ ಕುರಿತು.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯದ ಪರೀಕ್ಷಾ ಕಾರ್ಯಗಳಿಗಾಗಿ "ಲಾಜಿಸಿಸ್ ಕಂಪನಿ ಬೆಂಗಳೂರು ಇವರೊಂದಿಗೆ ಮಾಡಿಕೊಂಡಿರುವ ಒಪ್ಪಂದವನ್ನು ಡಿಸೆಂಬರ್ 17–12–2016ರ ವರೆಗೆ ಎರಡು ವರ್ಷದ ಅವಧಿ ಮುಗಿಯುತ್ತದೆ. ಆದ್ದರಿಂದ ಈ ಒಡಂಬಡಿಕೆಯನ್ನು ಮುಕ್ತಾಯಗೊಳಿಸಲಾಗುವುದು ಮತ್ತು ಈ ಬಗ್ಗೆ ಸರಕಾರ ನೀಡಿರುವ ನೋಟಿಸನ್ನು ಕೈಬಿಡಲು ಕೋರಿ ದಿನಾಂಕ:2–8–2016ರಂದು ಸರಕಾರಕ್ಕೆ ಪತ್ರ ಬರೆಯಲಾಗಿದೆ". (ಪತ್ರ ಸಂಖ್ಯೆ:ಕರಾಮವಿವಿ/ಕಾ.ಕೇ.ನೋ/2016–17/2811 ದಿನಾಂಕ:2–8–2016 ಮಾನ್ಯ ಕುಲಸಚಿವರ ಸಹಿ ಇರುವ ಪತ್ರ) ಎಂದು ದಿನಾಂಕ:2–11–2016ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ತೆಗೆದುಕೊಂಡ ಕ್ರಮದಲ್ಲಿ ತಿಳಿಸಲಾಗಿತ್ತು. ಸರಕಾರಕ್ಕೆ ಬರೆದ ಪತ್ರದ ಪ್ರತಿಯನ್ನು ನೀಡಲಾಗಿತ್ತು.

ಆದರೆ ಸದರಿ ಒಪ್ಪಂದ ರದ್ದಾದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಒಂದು ವೇಳ ರದ್ದುಪಡಿಸದೇ ಇದ್ದಲ್ಲಿ ಮತ್ತು ಒಪ್ಪಂದವನ್ನು ಮುಂದುವರೆಸುವುದಾದಲ್ಲಿ ಸಿಂಡಿಕೇಟ್ ಅನುಮೋದನೆ ಮತ್ತು ಸರಕಾರದ ಪೂರ್ವಾನುಮತಿಯನ್ನು ಪಡೆದುಕೊಂಡ ನಂತರವೇ ಮುಂದುವರೆಸುವುದು ಸೂಕ್ತ. ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಮುಂದೆ ಸೂಕ್ತ ಚರ್ಚೆಗಾಗಿ ಮಂಡಿಸಿದೆ.

*ನಿರ್ಣಯ:–*

1. ***ಈ ಬಗ್ಗೆ ಸುದೀರ್ಘವಾಗಿ ಚರ್ಚೆ ನಡೆದು, ಎಪ್ರಿಲ್/ಮೇ–2017ರ ಪರೀಕ್ಷೆಯ ಕಾರ್ಯಗಳಿಗೆ ಲಾಜಿಸಿಸ್ ಸೇವೆಯನ್ನು ಮುಂದುವರಿಸುವುದು ಹಾಗೂ ಆನಂತರ ಟೆಂಡರ್ ಪ್ರಕ್ರಿಯೆ ಮೂಲಕ ಬೇರೆ ವ್ಯವಸ್ಥೆ ಜಾರಿಗೊಳಿಸಲು ಕ್ರಮಕೈಗೊಳ್ಳುವುದು ಸೂಕ್ತ ಎಂದು ತೀರ್ಮಾನಿಸಲಾಯಿತು.***
2. ***ಈ ವಿಷಯಕ್ಕೆ ಮಾನ್ಯ ಸಿಂಡಿಕೇಟ್ ಸದಸ್ಯರಾದ ಪ್ರೊ ಮಹೇಶ ಚಿಂತಾಮಣಿ ಅವರು ಡಿಸೆಂಟ್ ನೋಟ್ ಸಲ್ಲಿಸಿರುತ್ತಾರೆ (ಪತ್ರದ ಪ್ರತಿ ಲಗತ್ತಿಸಿದೆ).***

## ದಿನಾಂಕ:14–03–2017ರಂದು ಜರುಗಿದ 97ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

# *ಸಿಂಡಿಕೇಟ್ ಐಟಂ ಸಂಖ್ಯೆ : 16*

**ಸಿಂಡಿಕೇಟ್ ಸದಸ್ಯರಾದ ಡಾ.ಬಿರಾದಾರ ಅರವಿಂದ ಕುಮಾರ ಅವರು ಈ ಕೆಳಕಂಡ ಪ್ರಸ್ತಾವನೆ ಸಲ್ಲಿಸಿರುತ್ತಾರೆ.**

ವಿಷಯ:– ಸಂಯೋಜನೆ ಹೊಂದಿದ ಕಾಲೇಜುಗಳ ಭದ್ರತಾ ಠೇವಣಿ ಬಡ್ಡಿಯನ್ನು ಮರಳಿಸುವ ಕುರಿತು.

ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ಕಾಲೇಜುಗಳಿಗೆ ಸಂಯೋಜನೆ ನೀಡುವ ಸಂದರ್ಭದಲ್ಲಿ ಕಾಲೇಜುಗಳಿಂದ ಭದ್ರತಾ ಠೇವಣಿ ವಿಶ್ವವಿದ್ಯಾಲಯದ ಬ್ಯಾಂಕಿನಲ್ಲಿ ಇಟ್ಟುಕೊಳ್ಳುತ್ತಿದ್ದು, ಈ ಭದ್ರತಾ ಠೇವಣಿ ಮ್ಯಾಚುರಿಟಿ ಆದ ಮೇಲೆ ಮೂಲ ಭದ್ರತಾ ಠೇವಣಿಯ ಮೊತ್ತವನ್ನು ವಿಶ್ವವಿದ್ಯಾಲಯದಲ್ಲಿಯೇ ಇರಿಸಿಕೊಂಡ ಅದರ ಮೇಲೆ ಬಡ್ಡಿಯ ಹಣವನ್ನು ಆಯಾ ಕಾಲೇಜುಗಳಿಗೆ ಹಿಂದುರುಗಿಸಬೇಕಾಗಿರುತ್ತದೆ. ಆದರೆ ಇದುವರೆಗೆ ಮೂಲ ಠೇವಣಿಯ ಮೇಲೆ ಬಂದಂತಹ ಹಣವನ್ನು ಸಂಯೋಜನೆಗೊಂಡ ಕಾಲೇಜುಗಳಿಗೆ ನೀಡಿರುವುದಿಲ್ಲ. ವಿವಿಧ ಕಾಲೇಜುಗಳು ಬಡ್ಡಿ ಹಣ ಹಿಂದಿರುಗಿಸಲು ಕೇಳಿರುತ್ತಾರೆ. ಆದ್ದರಿಂದ ಠೇವಣಿ ಹಣದ ಮೇಲೆ ಬಡ್ಡಿ ಠೇವಣಿಯ ದಿನಾಂಕ ಮುಗಿದ ಮೇಲೆ ಕಾಲೇಜುಗಳಿಗೆ ಮರಳಿಸಲು ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಲು ಹಾಗೂ ನಿರ್ಣಯ ಕೈಗೊಳ್ಳಲು ಮಂಡಿಸಲಾಗಿದೆ.

*ನಿರ್ಣಯ:–*

***ಈ ವಿಷಯ ಕುರಿತು ದೀರ್ಘವಾಗಿ ಚರ್ಚಿಸಿ, ಕರಡು ಪರಿನಿಯಮಾವಳಿ ಸಮಿತಿ ಸಭೆಯಲ್ಲಿ ಮಂಡಿಸಲು ತೀರ್ಮಾನಿಸಲಾಯಿತು.***

**ದಿನಾಂಕ:14–03–2017ರಂದು ಜರುಗಿದ 97ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ : 17*

**ಸಿಂಡಿಕೇಟ್ ಸದಸ್ಯರಾದ ಮಾನ್ಯ ಆರ್.ಬಿ.ಭಾವಿಕಟ್ಟಿ ಅವರು ಈ ಕೆಳಕಂಡ ಪ್ರಸ್ತಾವನೆ ಸಲ್ಲಿಸಿರುತ್ತಾರೆ.**

ವಿಷಯ:– ಪಿ.ಡಬ್ಲೂ.ಜಿ–34 ಅಡಿಯಲ್ಲಿ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂಧಿಗಳ ವೇತನ ಹೆಚ್ಚಿಸುವ ಕುರಿತು.

*ನಿರ್ಣಯ: ಮುಂದೂಡಲಾಯಿತು.*

**ದಿನಾಂಕ:14–03–2017ರಂದು ಜರುಗಿದ 97ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ : 18*

**ಸಿಂಡಿಕೇಟ್ ಸದಸ್ಯರಾದ ಮಾನ್ಯ ನಾನಾಗೌಡ ಹಿಪ್ಪರಗಿ ಅವರು ಈ ಕೆಳಕಂಡ ಪ್ರಸ್ತಾವನೆ ಸಲ್ಲಿಸಿರುತ್ತಾರೆ.**

1. ವಿಷಯ:–ವಿಶ್ವವಿದ್ಯಾಲಯದಲ್ಲಿ ಕಾಲೇಜು ಶಿಕ್ಷಕರಿಗಾಗಿ ಕಾಲೇಜು ಶಿಕ್ಷಕರ ನಿಧಿಯನ್ನು ಸ್ಥಾಪಿಸುವ ಕುರಿತು.

   ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸುವ ಸಂದರ್ಭದಲ್ಲಿ ಶಿಕ್ಷಕರು ಅನಿರಿಕ್ಷಿತವಾಗಿ ದೈಹಿಕ ತೊಂದರೆಗೊಳಗಾದಲ್ಲಿ ತಕ್ಷಣ ಆರ್ಥಿಕ ಸಂಕಷ್ಟದಲ್ಲಿರುವವರಿಗೆ ವಿಶ್ವವಿದ್ಯಾಲಯದಿಂದ ಆರ್ಥಿಕ ಸಹಾಯ ಒದಗಿಸಲು ಅನುಕೂಲವಾಗುವಂತೆ ಶಿಕ್ಷಕರ ಕಲ್ಯಾಣ ನಿಧಿಯನ್ನು ಸ್ಥಾಪಿಸಿ ಅದರಿಂದ ಆರ್ಥಿಕ ಸಹಾಯವನ್ನು ಮಾಡಲು ಸಹಾಯವಾಗುತ್ತದೆ.

   ಏಕೆಂದರೆ ನಮ್ಮ ವಿಶ್ವವಿದ್ಯಾಲಯದ ಬಹುತೇಕ ಕಾಲೇಜುಗಳು ಅನುದಾನರಹಿತವಾಗಿದ್ದು ಅಂತಹ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರುಗಳು ಸಾಕಷ್ಟು ಆರ್ಥಿಕ ತೊಂದರೆಯನ್ನು ಅನುಭವಿಸುತ್ತಿದ್ದು ಯಾವುದೇ ಕರ್ತವ್ಯ ನಿರತ ಸಂದರ್ಭದಲ್ಲಿ ದೈಹಿಕ ತೊಂದರೆಯಾದಾಗ ಆರ್ಥಿಕ ಸಹಾಯ ಒದಗಿಸಲು ಅನುಕೂಲವಾಗುವಂತೆ, ಪದವಿ ಕಾಲೇಜಿನ ಶಿಕ್ಷಕರ ಕಲ್ಯಾಣ ನಿಧಿಯನ್ನು ಸ್ಥಾಪಿಸಲು ಸಿಂಡಿಕೇಟ್ ಸಭೆಯ ಅವಗಾಹನೆಗೆ ಮಂಡಿಸಿದೆ.

   **ನಿರ್ಣಯ:–**

   **ಈ ವಿಷಯವನ್ನು ಪ್ರಾಂಶುಪಾಲರ ಸಭೆಯಲ್ಲಿ ಮಂಡಿಸಲು ತೀರ್ಮಾನಿಸಲಾಯಿತು**

2. ಪದವಿ ಪ್ರಶ್ನೆ ಪತ್ರಿಕೆ ಮಾದರಿಯಲ್ಲಿ ಸಮನ್ವಯತೆ ಇರುವ ಕುರಿತು.

   **ನಿರ್ಣಯ:–**

   **ಪ್ರಶ್ನೆ ಪತ್ರಿಕೆ ಮಾದರಿಯಲ್ಲಿ ಸಮನ್ವಯತೆ ಕುರಿತಂತೆ, ಅಧ್ಯಯನ ಮಂಡಳಿ, ವಿವಿಧ ನಿಕಾಯಗಳ ಹಾಗೂ ವಿದ್ಯಾವಿಷಯಕ ಪರಿಷತ್‌ನ ತೀರ್ಮಾನಕ್ಕೆ ಬಿಡಲಾಯಿತು.**

**ದಿನಾಂಕ:14–03–2017ರಂದು ಜರುಗಿದ 97ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಪುರವಣಿ ಸಂಖ್ಯೆ:01*

**ವಿಷಯ:–** ವಿಶ್ವವಿದ್ಯಾಲಯದಲ್ಲಿ ಕಾನೂನು ಸಲಹೆಗಾರರ ಪಟ್ಟಿಯಲ್ಲಿ, ಶ್ರೀ.ಪಿ.ಕರುಣಾಕರ ಮತ್ತು ಶ್ರೀ.ಎ.ಎಂ.ಸುರೇಶ ರೆಡ್ಡಿ ಇಬ್ಬರನ್ನು ಸೇರಿಸುವ ಕುರಿತು.

ಉಲ್ಲೇಖ:– Sri.K.M.Nataraj, Additional Solicitor General of India ಇವರ ಪತ್ರ ಸಂಖ್ಯೆ: ASG/ADM/002/2017 dated 01–02–2017.

ನಿರ್ಣಯ:–

**ವಿಶ್ವವಿದ್ಯಾಲಯದಲ್ಲಿ ಕಾನೂನು ಸಲಹೆಗಾರರ ಪಟ್ಟಿಯಲ್ಲಿ, ಶ್ರೀ.ಪಿ.ಕರುಣಾಕರ ಮತ್ತು ಶ್ರೀ.ಎ.ಎಂ.ಸುರೇಶ ರೆಡ್ಡಿ ಇಬ್ಬರನ್ನು ಸೇರಿಸಲು ಅನುಮೋದಿಸಲಾಯಿತು.**

## ದಿನಾಂಕ:14–03–2017ರಂದು ಜರುಗಿದ 97ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

### *ಸಿಂಡಿಕೇಟ್ ಪುರವಣಿ ಸಂಖ್ಯೆ:02*

**ವಿಷಯ:–** ಶ್ರೀ.ಕೆ.ನಾಗರಾಜ, ಅವರು ನಿಯೋಜನೆ ಮೇಲೆ ವಿಶ್ವವಿದ್ಯಾಲಯದಲ್ಲಿ ಸ್ಥಾನಿಕ ಅಭಿಯಂತರರು(ಕಾರ್ಯಪಾಲಕ ಅಭಿಯಂತರರು) ಹುದ್ದೆಗೆ ಹಾಜರಾದ ಕುರಿತು.

**ಉಲ್ಲೇಖ:–** ಮುಖ್ಯ ಅಭಿಯಂತರರು, ಕನೀನಿನಿ, ಕಲಬುರ್ಗಿ ಇವರ ಪತ್ರ ಸಂಖ್ಯೆ:ಸಂ:ಕನೀನಿನಿ/ನೀಯೋವಕಸ/ಸಿ–4/ಕಾ/ಅ/ಪದೋನ್ನತಿ/2016–17/3905 ದಿನಾಂಕ:22–2–2017.

**ನಿರ್ಣಯ:– ಶ್ರೀ.ಕೆ.ನಾಗರಾಜ, ಸ್ಥಾನಿಕ ಅಭಿಯಂತರರು(ಕಾರ್ಯಪಾಲಕ ಅಭಿಯಂತರರು) ಅವರು ದಿನಾಂಕ:23–02–2017ರಂದು ಬೆಳಿಗ್ಗೆ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವ ಬಗ್ಗೆ ಘಟನೋತ್ತರ ಅನುಮೋದನೆ ನೀಡಲಾಯಿತು.**

## ದಿನಾಂಕ:14–03–2017ರಂದು ಜರುಗಿದ 97ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

### *ಸಿಂಡಿಕೇಟ್ ಪುರವಣಿ ಸಂಖ್ಯೆ:03*

**ವಿಷಯ:–** ಸ್ನಾತಕ ಹಾಗೂ ಸ್ನಾತಕೋತ್ತರ ಪರೀಕ್ಷೆಗಳ ಮೌಲ್ಯಮಾಪನದ ವೇಳೆಯಲ್ಲಿ ಹೆಚ್ಚಿನ ಕೆಲಸ ನಿರ್ವಹಿಸಿದ ಫ್ಯಾಕ್ಟೋಟಮ್(Factotum) ಅವರಿಗೆ ತಲಾ ರೂ.350/– ಗಳನ್ನು ಹಾಗೂ ಜವಾನಿರಿಗೆ ರೂ.250/–ಗಳನ್ನು ಸಂಭಾವನೆ ನೀಡುತ್ತದೆ. ಅದರಂತೆ ಆರ್ಥಿಕ ವಿಭಾಗದ ಸಿಬ್ಬಂದಿ ವರ್ಗದವರು ಸಹ ಕೇಂದ್ರೀಯ ಮೌಲ್ಯಮಾಪನ ಹೆಚ್ಚಿನ ಕೆಲಸ ನಿರ್ವಹಿಸುವರು, ಸದರಿಯವರಿಗೆ ಸಂಭಾವನೆಯನ್ನು ಕೊಡಮಾಡಲು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೊದನೆಗಾಗಿ ಮಂಡಿಸಿದೆ.

ನಿರ್ಣಯ:–

**ಆರ್ಥಿಕ ವಿಭಾಗದ ಮೂರು ಜನ ಫ್ಯಾಕ್ಟೋಟಮ್(Factotum) ಅವರಿಗೆ ಒಂದು ದಿನಕ್ಕೆ ತಲಾ ರೂ.350/– ಹಾಗೂ ಒಬ್ಬ ಜವಾನನಿಗೆ ರೂ.250/– ಸ್ನಾತಕ ಪರೀಕ್ಷೆ ಮೌಲ್ಯಮಾಪನ ವೇಳೆಯಲ್ಲಿ 25 ದಿವಸ ಹಾಗೂ ಸ್ನಾತಕೋತ್ತರ ಪರೀಕ್ಷೆ ಮೌಲ್ಯಮಾಪನ ವೇಳೆಯಲ್ಲಿ 15 ದಿವಸ ಸಂಭಾವನೆಯನ್ನು ನೀಡಲು ತೀರ್ಮಾನಿಸಲಾಯಿತು.**

## ದಿನಾಂಕ:14–03–2017ರಂದು ಜರುಗಿದ 97ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

### *ಸಿಂಡಿಕೇಟ್ ಪುರವಣಿ ಸಂಖ್ಯೆ:04*

**ವಿಷಯ:–** ಮಾನ್ಯ ಕುಲಪತಿಗಳ ನಿವಾಸಕ್ಕೆ ಪಾರ್ಕಿಂಗ್ ಕಲ್ಲನ್ನು ಅಳವಡಿಸುವ ಕುರಿತು

ಮೇಲ್ಕಾಣಿಸದ ವಿಷಯಕ್ಕೆ ಸಂಬಂಧಿಸಿದಂತೆ, ಜ್ಞಾನಶಕ್ತಿ ಆವರಣದಲ್ಲಿನ ಮಾನ್ಯ ಕುಲಪತಿಗಳ ನಿವಾಸಕ್ಕೆ ಪಾರ್ಕಿಂಗ ಸಲುವಾಗಿ ಸುಮಾರು 7,303 ಚದುರ ಅಡಿ ಆಗಲವಿದ್ದು ಅಂದಾಜು 3,652 ಸಂಖ್ಯೆಯ 2'–0" X 1' –0" ಇಂಚು ದಪ್ಪ ಕೆಂಪು, ಹಳದಿ ಮತ್ತು ಬಿಳಿ ಬಣ್ಣದ ಕಲ್ಲುಗಳು ಬೇಕಾಗುತ್ತದೆ. ಸದರಿ ಕೆಲಸದ ಅಂದಾಜು ವೆಚ್ಚ ಪತ್ರಿಕೆಯನ್ನು ಮಾರುಕಟ್ಟೆ ದರದ ಆಧಾರದ ಮೇಲೆ ತಯಾರಿಸಲಾಗಿದೆ. ಅದಕ್ಕಾದ ವೆಚ್ಚ ರೂ.8,94,840/–. ಸದರಿ ಕಾಮಗಾರಿಯನ್ನು ತಾಂತ್ರಿಕ ವಿಭಾಗದಿಂದ ನಿರ್ವಹಿಸುವ ಸಲುವಾಗಿ ಸಿಂಡಿಕೇಟ್ ಅವಗಾಹನೆಗಾಗಿ ಸಲ್ಲಿಸಿದೆ.

**ನಿರ್ಣಯ:– ಅನುಮೋದಿಸಲಾಯಿತು.**

## ದಿನಾಂಕ:14–03–2017ರಂದು ಜರುಗಿದ 97ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

### *ಸಿಂಡಿಕೇಟ್ ಪುರವಣಿ ಸಂಖ್ಯೆ:05*

**ವಿಷಯ:–** ಆಡಳಿತ ಭವನ ಕಟ್ಟಡಕ್ಕೆ ಲಿಫ್ಟ್ ಅಳವಡಿಸುವ ಕುರಿತು.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಜ್ಞಾನಶಕ್ತಿ ಆವರಣದ ಆಡಳಿತ ಭವನದ ಕಟ್ಟಡದಲ್ಲಿನ ಮಾನ್ಯ ಕುಲಪತಿಗಳ ಹಾಗೂ ಕುಲಸಚಿವರ ಕಛೇರಿಗಳು ಮೊದಲನೇ ಮಹಡಿಯಲ್ಲಿದ್ದು ಸಾರ್ವಜನಿಕರು, ಹಿರಿಯ ನಾಗರಿಕರು ಹಾಗೂ ವಿಕಲಚೇತನರ ಅನುಕೂಲಕ್ಕಾಗಿ ಲಿಫ್ಟ್ ಅಳವಡಿಸಬೇಕಾಗಿರುತ್ತದೆ. ಸದರಿ ಕೆಲಸಕ್ಕೆ ಸುಮಾರು ರೂ.10.00ಲಕ್ಷ ರಿಂದ 12.00ಲಕ್ಷ ಪ್ರತಿ ಲಿಫ್ಟ್ ವೆಚ್ಚವಾಗಲಿದ್ದು, ಸದರಿ ಕೆಲಸವನ್ನು ಇ–ಪ್ರೊಕ್ಯುರ್‌ಮೆಂಟ್‌ನಲ್ಲಿ ಟೆಂಡರ್ ಕರೆದು ಕೆಲಸವನ್ನು ನಿರ್ವಹಿಸಲು ಸಿಂಡಿಕೇಟ್ ಅನುಮೋದನೆಗೆ ಮಂಡಿಸಿದೆ.

**ನಿರ್ಣಯ:– ರೂ.25,00,000/– ಮೀರದಂತೆ ಆಡಳಿತ ಭವನ ಕಟ್ಟಡಕ್ಕೆ ಲಿಫ್ಟ್ ಅಳವಡಿಸಲು ಅನುಮೋದಿಸಲಾಯಿತು.**

## ದಿನಾಂಕ:14–03–2017ರಂದು ಜರುಗಿದ 97ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

### *ಸಿಂಡಿಕೇಟ್ ಪುರವಣಿ ಸಂಖ್ಯೆ:06*

**ವಿಷಯ:–** ಮಂಡ್ಯ ಹೊರಾವರಣದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸ್ನಾತಕೋತ್ತರ ವಿದ್ಯಾರ್ಥಿನಿಯರ ವಿದ್ಯಾರ್ಥಿನಿಲಯದ ನಿರ್ಮಾಣಕ್ಕೆ ಜಮೀನನ್ನು ನೀಡುವ ಕುರಿತು.

**ನಿರ್ಣಯ:– ಮಂಡ್ಯ ಬಿ.ಹೊಸೂರ ಕಾಲೋನಿಯ ಹೊರಾವರಣದ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರಕ್ಕೆ, ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಮಂಡ್ಯ ಹಾಗೂ ವಿಸ್ತರಣಾಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 250 ವಿದ್ಯಾರ್ಥಿನಿಯರ ಸಂಖ್ಯಾಬಲದ ಸ್ನಾತಕೋತ್ತರ ವಿದ್ಯಾರ್ಥಿನಿಯರ ವಸತಿನಿಲಯ ನಿರ್ಮಾಣ ಮಾಡಲು(ರೂ.2.50ಕೋಟಿ ವೆಚ್ಚದಲ್ಲಿ) ಒಂದು ಎಕರೆ ನಿವೇಶನವನ್ನು ನೀಡುವಂತೆ ತಿಳಿಸಿರುವುದರಿಂದ, ಸರ್ಕಾರದಿಂದ ಮಂಜೂರಾಗಿರುವ ಜೀಗುಂಡಿ ಪಟ್ಟಣ ಗ್ರಾಮ ಸರ್ವೆ ನಂ–9ರ 18ಎಕರೆ ಜಮೀನಿನಲ್ಲಿ ಒಂದು ಎಕರೆ ಜಮೀನನ್ನು ಹಿಂದುಳಿದ ಕಲ್ಯಾಣ ಇಲಾಖೆಗೆ ನೀಡಲು ಅನುಮೋದಿಸಲಾಯಿತು.**

**<u>ದಿನಾಂಕ:14-03-2017ರಂದು ಜರುಗಿದ 97ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>**

## *ಸಿಂಡಿಕೇಟ್ ಪುರವಣಿ ಸಂಖ್ಯೆ:07*

**ವಿಷಯ:** ಎರಡು ವರ್ಷದ ಬಿ.ಎಡ್. ಕೋರ್ಸಿನ ಕ್ರಮನಿಯಮಾವಳಿ ಅನುಮೋದಿಸುವ ಕುರಿತು.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಎರಡು ವರ್ಷದ ಬಿ.ಎಡ್. ಕೋರ್ಸಿನ ಕ್ರಮನಿಯಮಾವಳಿಯಲ್ಲಿ ಪರೀಕ್ಷಾ ವಿಷಯಕ್ಕೆ ಸಂಬಂಧಿಸಿದಂತೆ ಕೆಲವು ಮಾರ್ಪಾಡನ್ನು ಮಾಡಲಾಗಿದ್ದು, ಸದರಿ ಕ್ರಮನಿಯಮಾವಳಿಗೆ ದಿನಾಂಕ:25-02-2017ರಂದು ಜರುಗಿದ ಅಧ್ಯಯನ ಮಂಡಳಿ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ. ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಸಿದೆ.

*ನಿರ್ಣಯ:- ಅನುಮೋದಿಸಲಾಯಿತು.*

**<u>ದಿನಾಂಕ:14-03-2017ರಂದು ಜರುಗಿದ 97ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>**

## *ಸಿಂಡಿಕೇಟ್ ಪುರವಣಿ ಸಂಖ್ಯೆ:08*

**ವಿಷಯ:** M/s Theorem Technology Bangalore ಅವರ ಬಾಕಿ ಬಿಲ್ಲು ಪಾವತಿಸುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ವಸತಿನಿಲಯಕ್ಕೆ ಬೇಕಾದ Software ಸಾಮಾಗ್ರಿಗಳನ್ನು M/s Theorem Technology Bangalore ಅವರಿಂದ ಕಛೇರಿ ಆದೇಶ ಸಂಖ್ಯೆ:KSWU/Engg/Stores/2014-15/1625 ದಿನಾಂಕ:02-01-2015ರ ಆದೇಶದ ಮೇರೆಗೆ ಖರೀದಿಸಲಾಗಿರುತ್ತದೆ. ಸದರಿಯವರ ಬಿಲ್ಲುಗಳು ಇಲ್ಲಿಯವರೆಗೆ ಪಾವತಿಯಾಗದೇ ಉಳಿದಿರುತ್ತದೆ. ಮೇಲ್ಕಂಡ ಸಂಸ್ಥೆಯವರು ಬಿಲ್ಲ್‌ನ ಮೊತ್ತವನ್ನು ಪಾವತಿಸುವ ಸಲುವಾಗಿ ದೂರವಾಣಿ ಮುಖಾಂತರ ವಿನಂತಿಸುತ್ತಿದ್ದಾರೆ. ಪಾವತಿಸಬೇಕಾದ ಬಿಲ್ಲ್‌ಗಳ ವಿವರ ಈ ಕೆಳಗಿನಂತಿದೆ. ಸದರಿ ಬಿಲ್ಲ್‌ಗಳನ್ನು ಪಾವತಿಸಲು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

| **ಕ್ರ.ಸಂ** | **ವಿವರ** | **ಬಿಲ್ಲ್ ನಂ/ದಿನಾಂಕ** | **ಮೊತ್ತ** |
|---|---|---|---|
| 1. | M/s Theorem Technology Bangalore | 185/7-1-2016 | 97,000/- |
| **ಒಟ್ಟು** | | | 97,000 |

**ನಿರ್ಣಯ:-**

**M/s Theorem Technology Bangalore ಅವರ ಬಿಲ್ಲ್‌ನ ಮೊತ್ತ ರೂ.97,000/-ಬಗ್ಗೆ ಆರ್ಥಿಕ ವಿಭಾದಲ್ಲಿ ಮೊದಲು ಪಾವತಿಸಿದೆಯೇ ಎಂಬ ಕುರಿತು ಪರಿಶೀಲಿಸಿ, ಪಾವತಿಸಲು ಅನುಮೋದಿಸಲಾಯಿತು.**

## *ಸಿಂಡಿಕೇಟ್ ಪುರವಣಿ ಸಂಖ್ಯೆ:09*

**ವಿಷಯ:** UG/PG Marks cards, M.Phil/Ph.D Course work & Convocation, Rank, Passing certificates ಗಳಲ್ಲಿ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ ಎಂದು ನಮೂದಿಸುವ ಬಗ್ಗೆ

**ನಿರ್ಣಯ:–**

1. **UG/PG Marks cards, M.Phil/Ph.D Course work & Convocation, Rank ,Passing certificates ಮತ್ತು ಪರೀಕ್ಷಾ ವಿಭಾಗದ ಇನ್ನಿತರ ದಾಖಲೆಗಳಲ್ಲಿ "ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ" ಎಂದು ನಮೂದಿಸುವುದರ ಜೊತೆಗೆ ಈ ಹಿಂದಿನ ಪದನಾಮ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ ಎಂದು ನಮೂದಿಸಬೇಕೆಂದು ತೀರ್ಮಾನಿಸಲಾಯಿತು.**
2. **ವಿಶ್ವವಿದ್ಯಾನಿಲಯ ಮತ್ತು ವಿಶ್ವವಿದ್ಯಾಲಯ ಎಂಬ ಪದಗಳ ಬಳಕೆ ಬಗ್ಗೆ ಚರ್ಚೆ ನಡೆದು, ವಿಶ್ವವಿದ್ಯಾಲಯ ಎಂಬ ಪದ ಬಳಸಲು ಕ್ರಮಕೈಗೊಳ್ಳುವಂತೆ ಸರಕಾರಕ್ಕೆ ಪತ್ರ ಬರೆಯಲು ಸದಸ್ಯರು ಸೂಚಿಸಿದರು. ಅದು ಒಪ್ಪಿತವಾಗಿ ಬರುವವರೆಗೆ "ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ" ಎಂದೇ ಬಳಸಲು ನಿರ್ಣಯಿಸಲಾಯಿತು.**

ಮಾನ್ಯ ಕುಲಪತಿಗಳು ವಿಶ್ವವಿದ್ಯಾಲಯದ 8ನೇ ಘಟಿಕೋತ್ಸವನ್ನು 04–04–2017ರಂದು ಜರುಗಿಸಲು ಘನವೆತ್ತ ಕುಲಾಧಿಪತಿಗಳು ಅನುಮೋದನೆ ನೀಡಿರುವುದನ್ನು ತಿಳಿಸಿದರು. ಆದ್ದರಿಂದ ದಿನಾಂಕ:03–04–2017 ರಂದು ಸಿಂಡಿಕೇಟ್ ಸಭೆ ಜರುಗಿಸಲಾಗುವುದು.

**ಕುಲಸಚಿವರಾದ ಪ್ರೊ.ಕೆ.ಪಿ.ಶ್ರೀನಾಥ್ ಅವರು ಸಭೆಯನ್ನು ಅರ್ಥಪೂರ್ಣಗೊಳಿಸಿದ ಹಾಗೂ ಮೌಲ್ಯಾಧಾರಿತ, ಸೂಕ್ತ ಸಲಹೆಗಳನ್ನು ಮುಂದಿಟ್ಟ ಎಲ್ಲ ಸದಸ್ಯರಿಗೆ ವಂದನೆಗಳನ್ನು ಸಲ್ಲಿಸಿದರು.**

**ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿಗಳು**
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ,
ವಿಜಯಪುರ

**ಕುಲಪತಿಗಳು ಹಾಗೂ ಸಭಾಧ್ಯಕ್ಷರು**
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ,
ವಿಜಯಪುರ